ಸನ್ನಡತೆ ಕಥೆಗಳ ಪುಸ್ತಕ

# ಸತ್ಯಕ್ಕೆ ಬೆಲೆ ಕೊಟ್ಟ ಗೆಳೆಯರು


ರಾಮಯ್ಯ ಮತ್ತು ಚಿನ್ನಯ್ಯ ಆಪ್ತ ಗೆಳೆಯರು. ರಾಮಯ್ಯನ ಚಿಕ್ಕಮ್ಮ ತನ್ನೆಲ್ಲಾ ಆಸ್ತಿಯನ್ನು ರಾಮಯ್ಯನ ವಶಕ್ಕೆ ಒಪ್ಪಿಸಿದ್ದಳು. ಅವನೊಂದಿಗೆ ವಾಸಿಸುತ್ತಿದ್ದಳು. ಆದರೆ ಅವಳಿಗೆ ರಾಮಯ್ಯನ ಹೆಂಡತಿಯಿಂದ ಕಿರುಕುಳ, ಅನ್ಯಾಯ ಹೆಚ್ಚಾಯಿತು. ತಾನು ಬೇರೆ ಜೀವಿಸುವುದಾಗಿ ಹೇಳಿ, ತನ್ನ ಪಾಲಿನ ಆಸ್ತಿ ಮಾರಿಸಿ ತನಗೆ ಹಣ ಕೊಡಿಸಬೇಕೆಂದು ರಾಮಯ್ಯನನ್ನು ಕೇಳಿಕೊಂಡಳು. ಆದರೆ ರಾಮಯ್ಯ ತಾನೇನನ್ನೂ ಕೊಡಲಾಗುವುದಿಲ್ಲ ಎಂದ. ಅಷ್ಟು ದಿನ ಅವಳನ್ನು ಮನೆಯಲ್ಲಿಟ್ಟುಕೊಂಡು ಸಾಕಿದ್ದುದಕ್ಕೆ ಅವಳ ಆಸ್ತಿ ಪಾಸ್ತಿಗೆ ಸರಿಹೋಯಿತು ಎಂದ. ತನ್ನ ಚಿಕ್ಕಮ್ಮನಿಗೆ ಆಸ್ತಿ ಕೊಡಲು ನಿರಾಕರಿಸಿದ. ಇದರಿಂದ ನೊಂದ ಆಕೆ ಹಳ್ಳಿಯ ಮುಖಂಡರೊಂದಿಗೆ ತನಗಾದ ಅನ್ಯಾಯ ತಿಳಿಸಿದಳು. ಪಂಚಾಯಿತಿ ಸೇರಿಸಿದಳು. ಆ ಪಂಚಾಯಿತಿಗೆ ರಾಮಯ್ಯನ ಗೆಳೆಯ ಚಿನ್ನಯ್ಯನೇ ತೀರ್ಪುಗಾರನಾಗಿದ್ದ. ತನ್ನ ಆಪ್ತ ಚಿನ್ನಯ್ಯ ತನ್ನ ಪಕ್ಷ ಹಿಡಿದು ತೀರ್ಪುಕೊಡುವನೆಂದು ರಾಮಯ್ಯ ಹಿಗ್ಗಿದ.

ವಿಚಾರಣೆ ನಡೆಯಿತು. "ರಾಮಯ್ಯ ತನ್ನ ಚಿಕ್ಕಮ್ಮನಿಗೆ ಮಾಡಿರುವುದು ವಂಚನೆ. ಅವಳ ಹೊಲ ಗದ್ದೆ ರಾಮಯ್ಯ ಹಿಂದಕ್ಕೆ ಅವಳಿಗೆ ಕೊಟ್ಟುಬಿಡಬೇಕು" ಎಂದು ಚಿನ್ನಯ್ಯ ತೀರ್ಪು ಕೊಟ್ಟ. ಪಕ್ಷಪಾತವಿಲ್ಲದ ತೀರ್ಪು ಕೇಳಿ ಎಲ್ಲರಿಗೂ ಸಂತೋಷವಾಯಿತು. ಆದರೆ ರಾಮಯ್ಯನ ಹೃದಯದಲ್ಲಿ ಚಿನ್ನಯ್ಯನ ಮೇಲೆ ಸೇಡು ಉಳಿಯಿತು.

ಒಂದು ಬಾರಿ ಆ ಊರಿನ ಮಾದಯ್ಯ ಎಂಬುವನು ಚಿನ್ನಯ್ಯನಿಂದ ಎರಡು ಎತ್ತುಗಳನ್ನು ಕೊಂಡುಕೊಂಡ. ಅವುಗಳ ಬೆಲೆಯನ್ನು ಒಂದೆರಡು ತಿಂಗಳಲ್ಲೇ ತೀರಿಸಿಬಿಡುವುದಾಗಿ ಹೇಳಿದ. ಆದರೆ ವಾಯಿದೆ ಮುಗಿಯಿತು. ಅನೇಕ ತಿಂಗಳು ಕಳೆದರೂ ಮಾದಯ್ಯ ಚಿನ್ನಯ್ಯನ ಹಣವನ್ನು ತೀರಿಸಲಾಗಲಿಲ್ಲ. ನಡುವೆ ಆ ಎತ್ತುಗಳಲ್ಲಿ ಒಂದು ಸತ್ತುಹೋಯಿತು. ಉಳಿದ ಒಂದು ಎತ್ತನ್ನು ತಂದು ಮಾದಯ್ಯ ಚಿನ್ನಯ್ಯನ ಕೊಟ್ಟಿಗೆಗೆ ತಂದು ಬಿಟ್ಟ.

ಚಿನ್ನಯ್ಯ ಹಣ ಕೇಳಿದಾಗ ಎತ್ತಿನ ಸಾವಿನಿಂದ ತನಗೆ ಅಪಾರ ನಷ್ಟ ವಾಗಿದೆಯೆಂದೂ ಆದ ಕಾರಣ ತಾನು ಹಣ ಕೊಡಲಾಗುವುದಿಲ್ಲ ಎಂದೂ ಹೇಳಿಬಿಟ್ಟ. ಇದರಿಂದ ಕೋಪ ಬಂತು ಚಿನ್ನಯ್ಯನಿಗೆ. ರಾಮಯ್ಯನ ಮೇಲೆ ಕೈ ಎತ್ತಿದ. ಕಡೆಗೆ ಅವರ ಜಗಳ ಊರಿನ ಪಂಚಾಯಿತರ ಬಳಿ ಹೋಯಿತು.

ತೀರ್ಪುಗಾರನಾಗಿ ರಾಮಯ್ಯನನ್ನು ಊರಿನ ಹಿರಿಯರು ಆರಿಸಿದರು. ಚಿನ್ನಯ್ಯನನ್ನು "ಏನಪ್ಪ ? ರಾಮಯ್ಯನನ್ನು ತೀರ್ಪುಗಾರನನ್ನಾಗಿ ಆರಿಸಿದರೆ ನಿನಗೆ ಸಮಾಧಾನವೇ?" ಎಂದು ಕೇಳಿದರು. ಚಿನ್ನಯ್ಯನು "ನನ್ನದೇನೂ



ರಾಮಯ್ಯನಿಂದ ಧರ್ಮಕ್ಕೆ ವಿರುದ್ಧವಾದ ತೀರ್ಪು ಬರೋಲ್ಲ

ಅಭ್ಯಂತರವಿಲ್ಲ. ಪಂಚಾಯಿತಿಯ ಮುಂದೆ ಶತ್ರು-ಮಿತ್ರರೆಂಬ ಭೇದ-ಭಾವ ಇರೋಲ್ಲ, ಪಂಚಾಯಿತನ ಬಾಯಿಂದ ಪರಮೇಶ್ವರ ಬರ್ತಾನೆ. ರಾಮಯ್ಯ ಧರ್ಮಪೀಠದ ಮೇಲೆ ಕುಳಿತಿದ್ದಾನೆ. ನಾನು ಮೋಸ, ವಂಚನೆ ಮಾಡಿದ್ದರೂ ರಾಮಯ್ಯನ ಬಾಯಿಂದ ಧರ್ಮಕ್ಕೆ ವಿರುದ್ಧವಾದ ತೀರ್ಪು ಬರೋಲ್ಲ- ಅಂತ ನನಗೆ ನಂಬಿಕೆ ಇದೆ ಸ್ವಾಮಿ" ಎಂದು ಹೇಳಿದ. ಕ್ಷಣಕಾಲ

ಪಂಚಾಯಿತರ ಪೀಠದಲ್ಲಿ ಕುಳಿತಿದ್ದ ರಾಮಯ್ಯನಿಗೆ ಜ್ಞಾನೋದಯವಾದಂತಾಯಿತು. ಚಿನ್ನಯ್ಯ ಮತ್ತು ಮಾದಯ್ಯ ತಮ್ಮ ತಮ್ಮ ಹೇಳಿಕೆ ಕೊಟ್ಟರು. ಕಡೆಗೆ ಪಂಚಾಯಿತರ ಸಲಹೆ-ಸಮ್ಮತಿ ತೆಗೆದುಕೊಂಡು ರಾಮಯ್ಯ ತೀರ್ಪು ಕೊಟ್ಟ. "ಒಂದು ಪದಾರ್ಥ ಮಾರಿದ ಮೇಲೆ ಅದರ ಮೇಲಿನ ಕಷ್ಟ-ನಷ್ಟ ಹಕ್ಕುಗಳೂ ಕೊಳ್ಳುವವನಿಗೇ ಸೇರುತ್ತದೆ. ಚಿನ್ನಯ್ಯನು ಜೋಡೆತ್ತುಗಳನ್ನು ಮಾರಿ ಆದ ಮೇಲೆ ಅದರ ಸಂಪೂರ್ಣ ಹಕ್ಕು ಮಾದಯ್ಯನದು. ಆದ್ದರಿಂದ ಮಾದಯ್ಯನು, ಚಿನ್ನಯ್ಯನ ಹಣ ಸಂಪೂರ್ಣವಾಗಿ ಸಂದಾಯ ಮಾಡಿಬಿಡಬೇಕು"-ಎಂದು ತೀರ್ಪುಕೊಟ್ಟ. ತೀರ್ಪಿನ ವಿವರಣೆ ಕೇಳಿ ಎಲ್ಲರೂ ಆಶ್ಚರ್ಯಪಟ್ಟರು. ಏಕೆಂದರೆ ರಾಮಯ್ಯ ತನಗೆ ಈಗ ಸಿಕ್ಕ ಅವಕಾಶದಿಂದ ಚಿನ್ನಯ್ಯನ ಮೇಲೆ ಸೇಡು ತೀರಿಸಿಕೊಳ್ಳಬಹುದೆಂದು ಅವರು ಊಹಿಸಿದ್ದರು. ಅಲ್ಲಿ ಬಂದಿದ್ದ ಹಿರಿಯ ಮುದುಕನೊಬ್ಬ ರಾಮಯ್ಯನನ್ನು ಅಪ್ಪಿಕೊಂಡುಬಿಟ್ಟ. "ರಾಮಯ್ಯ, ಇನ್ನೂ ಹಳ್ಳೀಲಿ ಧರ್ಮ ಸತ್ಯ ಅನ್ನೋದು ಉಳಿದೈತೆ. ನ್ಯಾಯಕ್ಕೆ ಗೆಳೆತನ, ಹಗೆತನ ಇಲ್ಲಾ ಅನ್ನೋಂದು ಈವತ್ತು ನೀನು ತೋರಿಸಿಕೊಟ್ಟೆ"—ಎಂದು ಕೊಂಡಾಡಿದ.

ಎಂತಹ ಕಷ್ಟ ಬರಲಿ ನಾವು 'ನ್ಯಾಯ-ಸತ್ಯ'ಗಳನ್ನು ಉಳಿಸಿಕೊಳ್ಳೋಣ.

## ಕಳ್ಳ ಹುಡುಗ - ಅವನ ತಾಯಿ

ಒಂದು ಪಟ್ಟಣದಲ್ಲಿ ಒಬ್ಬ ವರ್ತಕನಿದ್ದನು; ಅವನಿಗೆ ಡಿಂಭನೆಂಬ ಮಗನು ಹುಟ್ಟಿದನು. ಆ ವರ್ತಕನು ಸ್ವಲ್ಪ ದಿನದಲ್ಲಿಯೇ ಸತ್ತುಹೋದನು. ಮಗ ಡಿಂಭನನ್ನು ತಾಯಿ ಸಾಕುತ್ತಿದ್ದಳು. ಒಂದು ದಿನ ಇವಳು ಮಗುವನ್ನು ಹೆಗಲ ಮೇಲೆ ಕೂರಿಸಿಕೊಂಡು ಪೇಟೆಯಲ್ಲಿ ಹೋಗುತ್ತಿದ್ದಳು. ಒಬ್ಬ ತರಕಾರಿ ಮಾರುವವನು ಬಾಳೆ ಹಣ್ಣಿನ ಕುಕ್ಕೆಯನ್ನು ಹೊತ್ತುಕೊಂಡು ಮಗ್ಗುಲಲ್ಲಿ

ಮಗ್ಗುಲಲ್ಲಿ = ಪಕ್ಕ,

ಹೋಗುತ್ತಿದ್ದನು. ಆ ಹುಡುಗನು ಯಾರಿಗೂ ಕಾಣದಂತೆ ಮೇಲುಗಡೆಯಿಂದ ಒಂದು ಚಿಪ್ಪು ಹಣ್ಣು ತೆಗೆದುಕೊಂಡನು. ಮನೆಗೆ ಬಂದ ಮೇಲೆ ತಾಯಿಗೆ ಅದನ್ನು ತೋರಿಸಿದನು. ಅವಳು ಸಂತೋಷಪಟ್ಟು ಮಗುವನ್ನು ಆದರಿಸಿದಳು. ಕದ್ದು ತಂದ ಆ ಹಣ್ಣಿನಲ್ಲಿ ಎರಡನ್ನು ಅವನಿಗೆ ಕೊಟ್ಟು ಉಳಿದುದನ್ನು ತೆಗೆದಿರಿಸಿಕೊಂಡಳು. ಆ ಮಗುವನ್ನು ವಿದ್ಯಾಭ್ಯಾಸಕ್ಕಾಗಿ ಮಠಕ್ಕೆ ಕಳುಹಿಸಿದಳು.

ಆ ಹುಡುಗ ಒಂದು ದಿನ ತನ್ನ ಸಂಗಾತಿಯ ಬಳಿ ಇದ್ದ ಒಂದು ಚಾಕುವನ್ನು ಕದ್ದು ತಂದು ತನ್ನ ತಾಯಿಯ ಕೈಯಲ್ಲಿ ಕೊಟ್ಟನು. ಆಗ ತಾಯಿಯು 'ಮಗು ಇದು ಚನ್ನಾಗಿದೆ, ಒಂದು ಕತ್ತರಿಯನ್ನೂ ಎಲ್ಲಿಯಾದರೂ ಸಂಪಾದಿಸಿಕೊಂಡು ಬಾ' ಎಂದು ಮಗನಿಗೆ ಉಪಚಾರ ಮಾಡಿದಳು. ಅವನಿಗೆ ತಿಂಡಿಗೆ ಸ್ವಲ್ಪ ಕಾಸು ಕೊಟ್ಟಳು.

ಡಿಂಭನು ತನ್ನ ಮನಸ್ಸಿನಲ್ಲಿ ನನ್ನ ತಾಯಿ ಒಳ್ಳೆಯವಳು, ಕೇಳಿದ್ದನ್ನು ಕೊಡುತ್ತಾಳೆ. ಅವಳಿಗೆ ಏನನ್ನಾದರೂ ನಿತ್ಯವೂ ತಂದು ಕೊಟ್ಟರೆ ತನಗೆ ಕಾಸು ಸಿಕ್ಕುವುದು ಎಂದು ನಗುತ್ತಾ ಮಠಕ್ಕೆ ಹೋದನು. ಒಂದು ದಿನ ಉಪಾಧ್ಯಾಯರ ವಸ್ತ್ರವನ್ನು, ಮತ್ತೊಂದು ದಿನ ಇನ್ನೊಬ್ಬ ಹುಡುಗನ ವಲ್ಲಿಯನ್ನು ಮತ್ತು ಕತ್ತರಿಯನ್ನು ಕದ್ದು ತಂದು ತಾಯಿಗೆ ಕೊಟ್ಟನು ಅವಳು ಆ ಹುಡುಗನ ನಡತೆಗೆ ಒಂದು ದಿನವಾದರೂ ಹೇಸಲಿಲ್ಲ. ಹೆದರಿಸಲಿಲ್ಲ ಬೇಕಾದ ತಿಂಡಿ ತೀರ್ಥ ಕೊಡುತ್ತಿದ್ದಳು.

ಒಂದು ದಿನ ಡಿಂಭನು ತನ್ನ ಜೊತೆಗಾರನ ಮನೆಗೆ ಹೋದನು. ಆ ಮನೆಯವರು ಮರೆತು ಆ ದಿನ ಒಂದು ಉಂಗುರವನ್ನು ಇಟ್ಟಿದ್ದರು. ಅದನ್ನು ಆ ಹುಡುಗನು ತನ್ನ ಅಂಗಿಯ ಜೇಬಿನಲ್ಲಿ ಹಾಕಿಕೊಂಡು ಬಂದು ತಾಯಿಗೆ ಕೊಟ್ಟನು. ಅವಳು ಸಂತೋಷಪಟ್ಟಳು. ಅವನಿಗೆ ಬೇಕಾದ ಬಟ್ಟೆಯನ್ನು ತೆಗೆದುಕೊಟ್ಟಳು. ಆ ಹುಡುಗನು ಹೀಗೆಯೇ ಎಲ್ಲೆಲ್ಲಿಯೂ ಕದಿಯುತ್ತಾ ದೊಡ್ಡ ಕಳ್ಳನಾದನು.

ಪೋಲೀಸಿನವರು ಎರಡು, ಮೂರು ಸಲ ಇವನನ್ನು ಶಿಕ್ಷೆಗೆ ಗುರಿ ಮಾಡಿದರು. ಆದರೂ ಆ ಡಿಂಭನು ತನ್ನ ಕೆಟ್ಟ ನಡತೆಯನ್ನು ಬಿಡಲಿಲ್ಲ.

ಕೊನೆಗೆ ಅವನನ್ನು ಶೂಲಕ್ಕೆ ಹಾಕುವುದು ಎಂದು ಅಧಿಕಾರಿ ಅಪ್ಪಣೆ ಮಾಡಿದರು.

ಕೂಡಲೇ ಶೂಲವು ಸಿದ್ಧವಾಯಿತು. ಆಗ ಕಳ್ಳನು ಅಧಿಕಾರಿಯನ್ನು ನೋಡಿ—"ಸ್ವಾಮಿ, ನನಗೆ ಮುದುಕಿಯಾದ ತಾಯಿ ಒಬ್ಬಳಿದ್ದಾಳೆ. ಅವಳನ್ನು ನೋಡಬೇಕು" ಎಂದನು.

ಕೂಡಲೇ ಮುದುಕಿಯನ್ನು ಕರೆಸಿದರು. ಆಗ ಅವಳು ಮಗನನ್ನು ನೋಡಿ ಅತ್ತಳು. ಡಿಂಭನು ಅವಳನ್ನು ಕುರಿತು "ಅಮ್ಮಾ! ನನಗೆ ಇಂಥ ಗತಿ ಬಂತು! ನಿನ್ನೊಡನೆ ಒಂದು ಮಾತನಾಡಬೇಕು; ಹತ್ತಿರ ಬಾ" ಎಂದು ಅವಳನ್ನು ಕರೆದನು. ತಾಯಿ ಅಳುತ್ತಾ ಹತ್ತಿರ ಬಂದಳು. ತಾಯಿಯನ್ನು ಅವನು ಹೊಡೆದು ಬಡಿದನು. ಅಲ್ಲಿದ್ದವರೆಲ್ಲಾ ಆ ಡಿಂಭನನ್ನು ಬೈದರು.

"ಸಾಯುವ ಸಮಯದಲ್ಲಿ ಇಂಥಾ ಕೆಲಸ ಏಕೆ ಮಾಡಿದೆ?" ಎಂದು ಅಧಿಕಾರಿಯು ಕೇಳಿದನು. "ಸ್ವಾಮಿ ಈ ಶಿಕ್ಷೆಯು ನನಗೆ ಇವಳಿಂದ ಉಂಟಾಯಿತು. ಬಾಲ್ಯದಲ್ಲಿ ನಾನು ಬಾಳೆ ಹಣ್ಣನ್ನು ಕದ್ದು ತಂದುಕೊಟ್ಟೆನು. ಆಗ ಆ ಕೆಲಸವನ್ನು ಮಾಡಬಾರದೆಂದು ಬುದ್ಧಿ ಹೇಳಲಿಲ್ಲ. ನಾನು ಕದ್ದು ತಂದಾಗಲೆಲ್ಲ ಸಂತೋಷಪಟ್ಟು ನನಗೆ ಬೇಕಾದ್ದನ್ನು ಕೊಟ್ಟಳು. ನಾನೂ ಅದೂ ಒಂದು ಕೆಲಸವೆಂದು ತಿಳಿದೆನು. ಆಗಿನಿಂದಲೂ ಪದಾರ್ಥಗಳನ್ನು ಕದಿಯುತ್ತಲೇ ಬಂದೆನು. ಈಗ ಇಂಥ ಕಷ್ಟ ಬಂತು" ಎಂದು ಹೇಳಿದನು.

ಮಕ್ಕಳ ಶಿಕ್ಷಣ ಮನೆಯಲ್ಲೇ!

## ಎತ್ತು ಕರೆದ ಹಾಲು

ಹಿಂದೆ ಅಕ್ಬರ್ ಎಂಬ ಚಕ್ರವರ್ತಿ ಇದ್ದ. ಆತನ ಆಸ್ಥಾನದಲ್ಲಿ ಬೀರ್‌ಬಲ್ ಎಂಬಾತ ಇದ್ದ. ಅವನು ಬಹಳ ಬುದ್ಧಿವಂತ. ಆತನ ಬಗ್ಗೆ ಅನೇಕ ಸ್ವಾರಸ್ಯವಾದ ಕತೆಗಳಿವೆ.

ಆಗ ಅಕ್ಬರನ ರಾಜ್ಯದಲ್ಲಿ ಒಬ್ಬ ಹಕೀಮ ಇದ್ದ. ಅವನು ಅನೇಕ ಕೆಟ್ಟ ಕೆಲಸಗಳನ್ನು ಮಾಡುತ್ತಿದ್ದ. ಬೀರ್‌ಬಲ್ ಉಪಾಯದಿಂದ ಅದಕ್ಕೆ ತಡೆ ಹಾಕಿದ್ದ. ಬೀರ್‌ಬಲ್ ತನ್ನ ಕೆಲಸಕ್ಕೆ ಅಡ್ಡಿ ಬಂದನಲ್ಲಾ ಎಂದು ಆ ಹಕೀಮನಿಗೆ ಕೋಪ ಬಂತು. ಅವನ ಮೇಲೆ ಸೇಡು ತೀರಿಸಿಕೊಳ್ಳಲು ಸಮಯ ಕಾಯುತ್ತಿದ್ದ.

ಅಕ್ಬರನಿಗೆ ಕಾಯಿಲೆ ಆಯಿತು. ಆಸ್ಥಾನದವರು ಆ ಹಕೀಮನನ್ನು ಆಸ್ಥಾನಕ್ಕೆ ಕರೆದರು. ಹಕೀಮನಿಗೆ ಒಳ್ಳೆಯ ಅವಕಾಶ ಸಿಕ್ಕಿತು. "ಈಗ ಬೀರಬಲ್ಲನ ಮೇಲೆ ಸೇಡು ತೀರಿಸಿಕೊಳ್ಳುತ್ತೇನೆ" ಎಂದುಕೊಂಡ.

ದೊರೆಗೆ ಒಂದು ಔಷಧ ತೋರಿಸಿ, "ಈ ಔಷಧ ಒಂದೇ ನಿಮ್ಮ ಕಾಯಿಲೆಗೆ ಮದ್ದು. ಇದನ್ನು ಸ್ವಲ್ಪ ಎತ್ತಿನ ಹಾಲಿನಲ್ಲಿ ಕದಡಿ ಕುಡಿಯಬೇಕು" ಎಂದ.

ಅದನ್ನು ಕೇಳಿ ದೊರೆಗೆ ಆಶ್ಚರ್ಯವಾಯಿತು. "ಎತ್ತು ಎಲ್ಲಾದರೂ ಹಾಲು ಕೊಡುತ್ತದೆಯೆ ಹಕೀಮ್?" ಎಂದು ಕೇಳಿದ.

"ಕೊಡುತ್ತದೆ, ಮಹಾಸ್ವಾಮಿ, ಬೀರಬಲ್ಲನಿಗೆ ತಿಳಿಸಿ. ಆತ ತಂದು ಕೊಡುತ್ತಾನೆ. ಆತನಷ್ಟು ಬುದ್ಧಿವಂತರು ಯಾರಿದ್ದಾರೆ ಮಹಾಪ್ರಭು?" ಎಂದ ಹಕೀಮ್.

ಬೀರಬಲ್ಲನನ್ನು ಒಂದು ಇಕ್ಕಟ್ಟು ಪ್ರಸಂಗಕ್ಕೆ ಸಿಕ್ಕಿಸಿ, ಅವನಿಗೆ ಅವಮಾನ ಮಾಡಬೇಕು ಎಂಬುದು ಆತನ ಉದ್ದೇಶ ಆಗಿತ್ತು.

ಮಾರೆ ಬೀರಬಲನನ್ನು ಕರೆಸಿದ. ನಡೆದ ಸಂಗತಿ ತಿಳಿಸಿ "ಎತ್ತಿನ ಹಾಲು ಬೇಕು. ಬೆಳಗಾಗುವುದರೊಳಗೆ ತರಿಸಿಕೊಡು" ಎಂದು ರಾಜಾಜ್ಞೆ ಆಯಿತು.

ಬೀರಬಲ್ಲನಿಗೆ ಹಕೀಮನ ಕುಹಕ ತಿಳಿಯಿತು. ಆದರೆ ಅವನಿಗೆ ಸರಿಯಾಗಿ ಬುದ್ಧಿ ಕಲಿಸಬೇಕು ಎಂದುಕೊಂಡು "ಆಗಲಿ ಮಹಾಪ್ರಭು" ಎಂದು ಮನೆಗೆ ಹೊರಟು ಬಂದ.

ಎಷ್ಟು ಹೊತ್ತು ಯೋಚನೆ ಮಾಡಿದರೂ ಉಪಾಯ ಹೊಳೆಯಲಿಲ್ಲ. ಊಟ, ನಿದ್ರೆ ಇಲ್ಲದೆ ಯೋಚನೆ ಮಾಡುತ್ತ ಕುಳಿತಿದ್ದ ತಂದೆಯನ್ನು ನೋಡಿ ಬೀರಬಲ್ಲನ ಮಗಳಿಗೆ ಚಿಂತೆಯಾಯಿತು.

"ಅಪ್ಪಾ, ನಿನ್ನ ಯೋಚನೆಗೆ ಕಾರಣವೇನು, ಅರಮನೆಯಲ್ಲಿ ಎಲ್ಲರೂ ಕ್ಷೇಮವಷ್ಟೆ?" ಎಂದು ತಂದೆಯನ್ನು ಮಗಳು ಕೇಳಿದಳು.

"ಎಲ್ಲರೂ ಕ್ಷೇಮವಾಗಿದ್ದಾರೆ. ಆದರೆ ಅರಮನೆಯಲ್ಲಿ ಕೆಲವು ವಿಚಿತ್ರಗಳು ನಡೆಯುತ್ತಿವೆ" ಎಂದು ನಡೆದ ಸಂಗತಿ ತಿಳಿಸಿದ ಬೀರ್‌ಬಲ್.

"ಬೆಳಗಾಗುವುದರೊಳಗೆ ಎತ್ತಿನ ಹಾಲು ತರಬೇಕಂತೆ, ಹೇಗೆ ತರಲಿ ಮಗಳೇ?" ಎಂದು ಕೇಳಿದ.

ಆ ಹುಡುಗಿ ಬೀರಬಲ್ಲನ ಮಗಳು ಕೇಳಬೇಕೆ? ಅಪ್ಪಾ, ಯೋಚಿಸಬೇಡಿ. ಆ ಕೆಲಸವನ್ನು ನನಗೆ ಬಿಡಿ. ನೀವು ಊಟಮಾಡಿ ನಿರಾತಂಕವಾಗಿ ಮಲಗಿ ನಿದ್ರಿಸಿ ಎಂದಳು.

ಆಗ ರಾತ್ರಿ ಹನ್ನೆರಡು ಗಂಟೆ ಸಮಯ, ಒಂದಿಷ್ಟು ಒಗೆಯುವ ಬಟ್ಟೆಗಳನ್ನು ತೆಗೆದುಕೊಂಡು ಆ ಹುಡುಗಿ ಅರಮನೆಯ ಕಡೆ ಹೊರಟಳು.

ಅಕ್ಬರ್ ಮಲಗಿಕೊಳ್ಳುವ ಕೊಠಡಿಯ ಸಮೀಪದಲ್ಲಿ ಒಂದು ಕೆರೆ. ಬೀರಬಲ್ಲನ ಮಗಳು ಆ ಕೆರೆಗೆ ಹೋಗಿ ಬಟ್ಟೆ ಒಗೆಯಲು ಶುರುಮಾಡಿದಳು. ನಿಶ್ಶಬ್ದವಾದ ವಾತಾವರಣದಲ್ಲಿ ದಪ! ದಪ! ಬಟ್ಟೆ ಒಗೆದರೆ ಕೇಳಬೇಕೆ? ಆ ಹುಡುಗಿ ಅದರಲ್ಲಿಯೂ ಹುಷ್, ಹುಷ್ ಎಂದು ಕೂಗುತ್ತ ಬಟ್ಟೆ ಒಗೆಯುತ್ತಿದ್ದಳು.

ರಾಜನ ನಿದ್ದೆಗೆ ಭಂಗ ಬಂತು. ದೊರೆಯ ಅಪ್ಪಣೆಯಂತೆ ಅರಮನೆಯ ಕಾವಲುಗಾರ ಬಂದು "ಯಾರು ನೀನು ?" ಎಂದ.

ನಾನು ನಮ್ಮಪ್ಪನ ಮಗಳು ಎಂದಳು ಆ ಹುಡುಗಿ.

ನಿಮ್ಮ ತಂದೆ ಯಾರು ? ಎಂದು ಆತ ಕೇಳಿದ.

ನಮ್ಮ ತಾಯಿಯ ಗಂಡ ಎಂದು ಉತ್ತರ ಕೊಟ್ಟಳು ಬೀರಬಲ್ಲನ ಮಗಳು.

ಕಾವಲುಗಾರನಿಗೆ ಕೋಪ ಬಂತು. ನಡಿ ಅರಮನೆಗೆ, ನಿನಗೆ ಪೂಜೆ ಮಾಡಿಸುತ್ತೇನೆ ಎಂದು ಆ ಹುಡುಗಿಯನ್ನು ದೊರೆಯ ಹತ್ತಿರಕ್ಕೆ ಕರೆದುಕೊಂಡು ಹೋದ.

ಆ ಹುಡುಗಿ ಹೆದರಿದಂತೆ ನಟಿಸಿದಳು.

"ಈ ದಿನ ಮಧ್ಯಾಹ್ನ ನಮ್ಮ ತಂದೆ ಒಂದು ಮಗು ಹೆತ್ತರು ಗಂಡು ಮಗು, ಬಹಳ ಚೆನ್ನಾಗಿದೆ. ಮಗುವಿಗೆ ಒಗೆದ ಬಟ್ಟೆ ಇರಲಿಲ್ಲ. ಮಧ್ಯಾಹ್ನದಿಂದಲೂ ನನಗೆ ಬಿಡುವಾಗಲಿಲ್ಲ. ಆದ್ದರಿಂದ ಈಗ ಬಟ್ಟೆ ಒಗೆಯಲು ಬಂದೆ" ಎಂದು ಹೇಳಿದಳು.

ದೊರೆಗೆ ಆಶ್ಚರ್ಯವಾಯಿತು. ನಿಮ್ಮ ತಂದೆ ಗಂಡು ಮಗು ಹೆತ್ತರೆ ? ನಿನಗೇನು ಬುದ್ಧಿ ಕೆಟ್ಟಿದೆಯೇ ? ಎಲ್ಲಾದರೂ ಗಂಡಸರು ಹೆರುತ್ತಾರೆಯೇ ? ಎಂದು ಕೇಳಿದ.

ಅದಕ್ಕೆ ಆ ಹುಡುಗಿ, ನಿಜ ಮಹಾಸ್ವಾಮಿ, ನನಗೂ ಆಶ್ಚರ್ಯವಾಗಿದೆ. ಇದುವರೆವಿಗೆ ಹೀಗಾಗಿರಲಿಲ್ಲ. ಈಗ ಈ ಊರಿನಲ್ಲಿ ಇಂಥಹ ಆಶ್ಚರ್ಯದ ಸಂಗತಿಗಳು ನಡೆಯುತ್ತಿವೆ ಎಂದಳು.

ದೊರೆ, ಏನದು ಆಶ್ಚರ್ಯದ ಸಂಗತಿ ನೀನು ಕೇಳಿದ್ದು ? ಎಂದು ಪ್ರಶ್ನಿಸಿದ.

ದೊರೆಗಳು ನಿನ್ನೆ ಒಬ್ಬರಿಗೆ ಎತ್ತಿನ ಹಾಲು ತೆಗೆದುಕೊಂಡು ಬಾ ಎಂದು ಆಜ್ಞೆ ಮಾಡಿದ್ದಾರಂತೆ. ಎತ್ತು ಹಾಲು ಕೊಡುವ ಹಾಗಿದ್ದಲ್ಲಿ ಗಂಡಸರು ಹೆರುವುದರಲ್ಲಿ ಏನಾಶ್ಚರ್ಯ ? ಎಂದಳು ಆ ಹುಡುಗಿ.

ಅದನ್ನು ಕೇಳಿ ದೊರೆಗೆ ನಗು ಬಂತು. ಮಗು ನೀನು ಬೀರಬಲ್ಲನಿಗೆ ಏನಾಗಬೇಕು ಎಂದು ಪ್ರಶ್ನಿಸಿದ. ಆ ಹುಡುಗಿ ಬೀರಬಲ್ಲನ ಮಗಳು ಎಂಬುದು ತಿಳಿಯಿತು.

ಮಗಳೇ ? ನಮಗೆ ಎತ್ತಿನ ಹಾಲು ತಲುಪಿತು ಎಂದು ನಿಮ್ಮ ತಂದೆಗೆ ತಿಳಿಸು. ಆ ಹಾಲನ್ನು ಬೀರಬಲ್ಲನು ಹೆತ್ತಿರುವ ಮಗನಿಗೇ ಕುಡಿಸಬೇಕು ಎಂದನು.



"ನೀನು ನಿನ್ನ ಮಗಳ ಸಂಗಡ ಕಳುಹಿಸಿದ ಎತ್ತಿನ ಹಾಲು ಬಂದು ತಲುಪಿತು" ಎಂದು ದೊರೆ ಬರೆದುಕೊಟ್ಟ

ನಮ್ಮ ತಂದೆ ನನ್ನ ಮಾತನ್ನು ಹೇಗೆ ನಂಬಿಯಾರು ? ಎಂದಳು ಆ ಹುಡುಗಿ.

ಆಗ ದೊರೆ ಒಂದು ಕಾಗದ ತೆಗೆದುಕೊಂಡು "ನೀನು ನಿನ್ನ ಮಗಳ ಸಂಗಡ ಕಳುಹಿಸಿದ ಎತ್ತಿನ ಹಾಲು ಬಂದು ತಲುಪಿತು" ಎಂದು ಬರೆದು ಕೊಟ್ಟ.

ಅದನ್ನು ತೂಗೆದುಕೊಂಡು ಆ ಹುಡುಗಿ ಮನೆಗೆ ಹೋದಳು. ಆದನ್ನು ನೋಡಿ ಬೀರಬಲ್ಲನಿಗೆ ಬಹಳ ಸಂತೋಷವಾಯಿತು! ಹಕೀಮನು ತಲೆ ತಗ್ಗಿಸುವಂತಾಯಿತು.

# ಅವನು ಡಂಬು ತೋರಿದ

ಒಂದು ಊರಿನಲ್ಲಿ ಸಾಂಬಾಜಿ ಎಂಬ ಧನಿಕನಿದ್ದ. ಆತನು ಎಷ್ಟು ಮುಂಗೋಪಿಯಾದ್ದನೋ ಅಷ್ಟೇ ದಯಾಳುವಾಗಿದ್ದ. ಆತನಿಗೆ ಬಡವರೆಂದರೆ ಪ್ರೀತಿ. ಅವರ ಕಷ್ಟ ಸುಖಗಳನ್ನು ತನ್ನ ಕಷ್ಟ ಸುಖವೆಂದೇ ತಿಳಿದು ಅವರಿಗೆ ಸಹಾಯ ಮಾಡುತ್ತಿದ್ದ.

ಅದೇ ಊರಿನಲ್ಲಿ ಶರಣಪ್ಪ ಎಂಬ ಬಡವ ಇದ್ದ. ಇವನು ಸಾಂಬಾಜಿಯ ಹತ್ತಿರ ಹೋದ. "ನನ್ನ ಮಗನಿಗೆ ವಿಪರೀತ ಕಾಯಿಲೆ. ಔಷಧಿ ತೆಗೆದುಕೊಳ್ಳಲು ಹಣವಿಲ್ಲ. ಸ್ವಲ್ಪ ಹಣ ಬೇಕಾಗಿದೆ. ಅದನ್ನು ಜಾಗ್ರತೆ ಹಿಂತಿರುಗಿಸುತ್ತೇನೆ" ಎಂದು ಅಂಗಲಾಚಿ ಬೇಡಿದ.

ಸಾಂಬಾಜಿ ಯಾವ ಮಾತನ್ನೂ ಆಡದೆ ಶರಣಪ್ಪನು ಕೇಳಿದಷ್ಟು ಹಣವನ್ನು ಕೊಟ್ಟು ಕಳಿಸಿದ. ಶರಣಪ್ಪ ಸಂತೋಷದಿಂದ ಹಣ ತೆಗೆದುಕೊಂಡು ಹಿಂತಿರುಗಿದ.

ಹಲವು ವರ್ಷಗಳು ಕಳೆದುವು. ಆದರೂ ಶರಣಪ್ಪ ಜಾಗ್ರತೆ ಹಿಂತಿರುಗಿಸುವೆನೆಂದು ತೆಗೆದುಕೊಂಡ ಹೋದ ಹಣ ವಾಪಸ್ಸು ಮಾಡಲಿಲ್ಲ.

ಸಾಂಬಾಜಿ ಒಂದು ದಿನ ಶರಣಪ್ಪನನ್ನು ಕರೆದುಕೊಂಡು ಬರುವಂತೆ ಸೇವಕರಿಗೆ ಹೇಳಿ ಕಳಿಸಿದ ಮೇಲೆ ಶರಣಪ್ಪ ಬಂದ. "ಹಣವನ್ನೇಕೆ ವಾಪಸ್ಸು ಮಾಡಲಿಲ್ಲ ಶರಣಪ್ಪ," ಎಂದು ಸಾಂಬಾಜಿ ಮೃದುವಾಗಿಯೆ ಕೇಳಿದ. ಶರಣಪ್ಪನೂ ದೀನನಾಗಿ "ಸ್ವಾಮಿ! ತುಂಬಾ ಅಡಚಣೆಯಾಯಿತು. ಈಗ ನನ್ನಲ್ಲಿ ಹಣವಿಲ್ಲ" ಎಂದು ಹೇಳಿದ. ಸಾಂಬಾಜಿಗೆ ಆತನ ಕಷ್ಟದ ಅರಿವಾಗಿ, "ನನಗೆ ಕೊಡಬೇಕಾಗಿರುವ ಹಣ ಮಾಫಿ ಮಾಡಿದ್ದೇನೆ. ಹೋಗು' ಎಂದು ಹೇಳಿದ. ಶರಣಪ್ಪ ಸಂತೋಷದಿಂದ ಹಿಂತಿರುಗಿದ.

ದಾರಿಯಲ್ಲಿ ಬರುತ್ತಿದ್ದಾಗ ಶರಣಪ್ಪನ ಸಾಲಗಾರ ನಾರಾಯಣಶೆಟ್ಟಿ ಶರಣಪ್ಪನಿಗೆ ಎದುರಾಗಿ ಸಿಕ್ಕಿದ. "ಏನಯ್ಯ ನಾರಾಯಣಶೆಟ್ಟಿ, ನಾನು ಕೊಟ್ಟ ಎರಡು ರೂಪಾಯಿ ವಾಪಸು ಕೊಡಲೇ ಇಲ್ಲ ?" ಎಂದು ಕೇಳಿದ.

ಅದಕ್ಕೆ ನಾರಾಯಣಶೆಟ್ಟಿ "ಇಲ್ಲ ಶರಣಪ್ಪ, ನನ್ನ ದುಡಿಯುವ ಮಗ ಸತ್ತುಹೋದ. ನಾನು ದುಡಿಯಲಾರದವನಾಗಿದ್ದೇನೆ. ಸ್ವಲ್ಪ ದಿವಸ ತಾಳು, ಹೇಗಾದರೂ ಮಾಡಿ ತೀರಿಸುತ್ತೇನೆ" ಎಂದ.

"ಅವೆಲ್ಲಾ ಸಾಧ್ಯವಿಲ್ಲ. ಕೊಟ್ಟೇ ಮುಂದಕ್ಕೆ ಹೋಗಬೇಕು" ಎಂದ ಶರಣಪ್ಪ ಗಡುಸಾಗಿ, ನಾರಾಯಣಶೆಟ್ಟಿ ದೈನ್ಯದಿಂದ ಬೇಡಿದ. ಆದರೂ ಶರಣಪ್ಪ ಜಗ್ಗಲಿಲ್ಲ. "ಕೊಟ್ಟೇ ತೀರಬೇಕು" ಎಂದ.

ಅದೇ ದಾರಿಯಲ್ಲಿ ಬರುತ್ತಿದ್ದ ಸಾಂಬಾಜಿಯ ಆಳು, ಇವರ ಸಂಭಾಷಣೆ ಕೇಳಿದ. ಧಣಿಗಳ ಹತ್ತಿರ ಹೋಗಿ ಶರಣಪ್ಪ ಮತ್ತು ನಾರಾಯಣಶೆಟ್ಟಿಯ ಮಾತುಕತೆ ತಿಳಿಸಿದ.

ತಕ್ಷಣ ಸಾಂಬಾಜಿ ಶರಣಪ್ಪನಿಗೆ ಬರುವಂತೆ ಹೇಳಿ ಕಳಿಸಿದ. ಶರಣಪ್ಪ ಆಳಿನ ಜತೆ ಬಂದದ್ದೇ ತಡ "ನಾನು ನಿನಗೆ ದಯೆ ತೋರಿದ್ದೆ. ಆದರೆ ನೀನು ಬೇಡಿಯುವರಿಗೆ ಅದೇ ರೀತಿ ದಯೆ ತೋರಬೇಕಾಗಿತ್ತು. ತನ್ನ ಕಷ್ಟ ಸುಖ ಗಳನ್ನು ತೋಡಿ ಕೊಂಡ ನಿನ್ನ ಸ್ನೇಹಿತ ನಾರಾಯಣಶೆಟ್ಟಿಗೆ ನೀನು ಬಲಾತ್ಕರಿಸಿ ಹಣ ವಸೂಲು ಮಾಡಿದೆ. ಅವನ ಕಷ್ಟಗಳಿಗಿಂತ ನಿನ್ನ ಕಷ್ಟಗಳು ಹೆಚ್ಚಿನದೇನಲ್ಲ. ನನ್ನ ಹಣವನ್ನು ಇಪ್ಪತ್ತನಾಲ್ಕು ಗಂಟೆಗಳೊಳಗಾಗಿ ವಾಪಸು ಮಾಡಬೇಕು," ಎಂದು ಸಾಂಬಾಜಿ ಕಟ್ಟಪ್ಪಣೆ ಮಾಡಿದ.

ಆಗ ಶರಣಪ್ಪ ತಾನು ನಾರಾಯಣಶೆಟ್ಟಿಗೆ ದಯೆ ತೋರಬೇಕಾಗಿತ್ತು ಎಂದುಕೊಂಡು ಮನೆಯ ಹಾದಿ ಹಿಡಿದ.

# ಶ್ರಮದ ಫಲ

ಉದಯನೆಂಬ ರಾಜನು ಉದಯಗಿರಿ ರಾಜ್ಯವನ್ನು ಆಳುತ್ತಿದ್ದನು. ರಾಜನು ಪ್ರತ್ಯಕ್ಷ ದೇವರಂತೆ ತನ್ನ ಪ್ರಜೆಗಳನ್ನು ತನ್ನ ಮಕ್ಕಳಿಗಿಂತಲೂ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದನು. ಅಲ್ಲದೆ ರಾಜನು ಬಹಳ ಬುದ್ಧಿವಂತನು. ಕಷ್ಟಪಟ್ಟು ದುಡಿಯುವವರ ಮೇಲೆ ಮಮತೆ ಹೆಚ್ಚು. ಅದೇ ರೀತಿ ಸೋಮಾರಿಗಳ ಮೇಲೆ ಬಹಳ ಕೋಪ.

ಹೀಗೆ ಇರುತ್ತಿರಲು ರಾಜನಿಗೆ ಒಬ್ಬ ಪ್ರಾಮಾಣಿಕ ಮತ್ತು ಶ್ರಮಜೀವಿಯಾದ ನೌಕರನ ಅವಶ್ಯಕತೆ ಉಂಟಾಯಿತು. ಒಳ್ಳೆಯ ನಂಬಿಕೆಯಾದವನನ್ನು ಹೇಗೆ ಕಂಡುಹಿಡಿಯಬೇಕೆಂದು ಆಲೋಚಿಸಿದನು. ಕೊನೆಗೆ ಒಂದು ಉಪಾಯ ಹೊಳೆಯಿತು. ಕೂಡಲೆ ನೌಕರಿಯ ಬಗ್ಗೆ ಪ್ರಕಟಣೆ ಹೊರಡಿಸಿದನು.

ರಾಜನ ಪ್ರಕಟಣೆಯನ್ನು ಕೇಳಿ ನಾಲ್ಕು ಜನರು ಅರಮನೆಗೆ ಬಂದರು. ರಾಜನು ಅವರ ಪೂರ್ವ ವಿಚಾರಗಳನ್ನು ತಿಳಿದುಕೊಂಡನು. ಅನಂತರ ಎಲ್ಲರಿಗೂ ಒಂದೊಂದು ಬಕೀಟು ಕೊಟ್ಟು, ಸಾಯಂಕಾಲದವರೆಗೂ ನೀರನ್ನು ಸೇದಿ ತೋಟದಲ್ಲಿದ್ದ ಇತರ ಬಕೀಟುಗಳಿಗೆ ಹಾಕಿರೆಂದು ತಿಳಿಸಿ ಅವರನ್ನು ಕಳುಹಿಸಿ ಕೊಟ್ಟನು.

ತೋಟದಲ್ಲಿ ನಾಲ್ಕು ಜನರೂ ನೀರನ್ನು ಸೇದಿ ಬಕೀಟುಗಳಿಗೆ ಹಾಕ ತೊಡಗಿದರು. ಆದರೆ ಬಕೀಟುಗಳು ತುಂಬಲಿಲ್ಲ. ಕಾರಣ ಆ ಬಕೀಟುಗಳಿಗೆ ಅನೇಕ ಚಿಕ್ಕ ಚಿಕ್ಕ ರಂಧ್ರಗಳಿದ್ದುವು.

ಈ ವಿಚಾರವು ಅವರಿಗೆ ತಿಳಿದ ನಂತರ ಒಬ್ಬನು ಇನ್ನೊಬ್ಬನಿಗೆ "ಅಣ್ಣಾ ನೋಡಿದೆಯಾ ! ರಾಜನಿಗೆ ಹುಚ್ಚು ಹಿಡಿದಿರಬೇಕು" ಎಂದ.

ಅದಕ್ಕೆ ಇನ್ನೊಬ್ಬನು "ನೀನು ಹೇಳುವುದು ಸರಿ, ಇಲ್ಲದಿದ್ದರೆ ಈ ರೀತಿಯಾಗಿ ನೀರನ್ನು ಸೇದಿ ಈ ತೂತುಬಿದ್ದ ಬಕೀಟುಗಳನ್ನು ತುಂಬಿರೆಂದು ಎಂದಿಗೂ ಹೇಳುತ್ತಿರಲಿಲ್ಲ" ಎಂದನು.

ಮತ್ತೊಬ್ಬನು "ಈ ಕೆಲಸಕ್ಕೆ ಬೆಂಕಿ ಹಾಕಿ. ರಾಜನು ನಮ್ಮನ್ನು ಬೇಕೆಂತಲೇ ಮೂರ್ಖರನ್ನು ಮಾಡಬೇಕೆಂದು ಆಗಲಾರದ ಈ ಕೆಲಸವನ್ನು ಕೊಟ್ಟಿರುವನು. ಇನ್ನು ಮುಂದೆ ಈ ಕೆಲಸ ಮಾಡಲು ಸಾಧ್ಯವಿಲ್ಲ. ಈಗ ಮನೆಗೆ ಹೋಗಿ ಊಟ ಮಾಡಿ ಸುಖವಾಗಿ ನಿದ್ದೆ ಮಾಡುವೆ" ಎಂದನು.

ನಾಲ್ಕನೆಯವನು "ಅಯ್ಯೋ! ಅಣ್ಣಗಳಿರಾ! ನಿಮ್ಮ ಮಾತುಗಳನ್ನು ಕೇಳಿ ನನಗೆ ದುಃಖವಾಗುತ್ತಿದೆ. ಏಕೆಂದರೆ ರಾಜನು ಹೇಳಿದ ಕೆಲಸ ಮಾಡತಕ್ಕದ್ದು ನಮ್ಮ ಕರ್ತವ್ಯ. ಅದು ವ್ಯರ್ಥವೆನ್ನದೆ ನಮ್ಮ ಕಾರ್ಯವನ್ನು ಮಾಡಬೇಕು" ಎಂದನು.

ಅದಕ್ಕೆ ಮೊದಲನೆಯವನು –"ಬೇಕಾದರೆ ನೀನೊಬ್ಬನೇ ಮಾಡು ನಾವು ಹೋಗುತ್ತೇವೆ" ಎಂದು ಅವರು ಹೊರಟು ಹೋದರು.


ಕೊನೆಯವನು ಕರ್ತವ್ಯ ಮರೆಯದೆ ತನ್ನ ಕೆಲಸ ಮಾಡಲಾರಂಭಿಸಿದನು. ನೀರನ್ನು ಸೇದಿ ಬಕೀಟಿಗೆ ಹಾಕಲಾರಂಭಿಸಿದನು. ನೀರು ಬಕೀಟಿನಲ್ಲಿ ನಿಲ್ಲದೆ ಹೋಯಿತು. ಸಾಯಂಕಾಲವಾಗುತ್ತಾ ಬಂದಿತು. ಬಾವಿಯಲ್ಲಿ ನೀರು ಕಡಿಮೆಯಾಗುತ್ತಾ ಬಂದಿತು. ಅಕಸ್ಮಾತ್ ಅವನಿಗೆ ಬಾವಿಯಲ್ಲಿ ಪ್ರಕಾಶವಾಗಿ ಏನೋ ಕಂಡಿತು. ಅದೇನೆಂದು ನೋಡಲು, ಅದು ಒಂದು ವಜ್ರದ ಉಂಗುರವಾಗಿತ್ತು. ಕೂಡಲೇ ಅವನು ಅದನ್ನು ತೆಗೆದುಕೊಂಡು ಅರಮನೆಗೆ ಬಂದನು.

"ಈ ಉಂಗುರವು ನನಗೆ ಬಾವಿಯಲ್ಲಿ ಸಿಕ್ಕಿತು" ಎಂದು ಹೇಳಿದನು.

ಅದಕ್ಕೆ ರಾಜನು–"ನಿನ್ನ ಜೊತೆಗಾರರು ಎಲ್ಲಿ?" ಎಂದು ಕೇಳಿದನು. ಅದಕ್ಕೆ ಅವನು ನಡೆದ ವಿಚಾರವನ್ನೆಲ್ಲಾ ತಿಳಿಸಿದನು.

ರಾಜನು ಆ ವಿಚಾರವನ್ನು ಕೇಳಿ ಸಂತೋಷದಿಂದ–ನೀನು ಬಹಳ ಶ್ರಮಜೀವಿ. ಹಾಗೂ ಪ್ರಾಮಾಣಿಕನಾಗಿರುವೆ. ನಿನ್ನ ಗುಣವನ್ನು ನಾನು ಮೆಚ್ಚಿರುವೆನು. ಅದಕ್ಕಾಗಿ ನೀನು ಈ ಉಂಗುರವನ್ನು ಬಹುಮಾನವಾಗಿ ತೆಗೆದುಕೋ. ನಿಮ್ಮನ್ನು ಪರೀಕ್ಷಿಸಬೇಕೆಂದು ನಾನು ಉದ್ದೇಶಪೂರ್ವಕವಾಗಿ

ಈ ಉಂಗುರವನ್ನು ಬಾವಿಯಲ್ಲಿ ಹಾಕಿದ್ದೆನು. ಅಲ್ಲದೆ ರಂಧ್ರದ ಬಕೀಟುಗಳನ್ನು ಕೊಟ್ಟಿದ್ದೆನು. ನಿನ್ನ ಶ್ರಮಕ್ಕೆ ತಕ್ಕ ಫಲ ನಿನಗೆ ದೊರೆಯಿತು" ಎಂದು ಹೇಳಿದನು.



ನಿನ್ನ ಗುಣವನ್ನು ನಾನು ಮೆಚ್ಚಿದೆನು. ಆದಕಾರಣ ನೀನು ಈ ಉಂಗುರವನ್ನು ಬಹುಮಾನವಾಗಿ ತೆಗೆದುಕೋ

ಮರುದಿನ ಅವನು ಆ ರಾಜ್ಯದ ಅರಮನೆಯ ಮುಖ್ಯ ಕಾವಲುಗಾರನಾಗಿ ನೇಮಕವಾದನು. ಕಷ್ಟಪಟ್ಟು ದುಡಿಯುವ ಗುಣ ಮತ್ತು ಪ್ರಾಮಾಣಿಕತೆ ಇದ್ದರೆ ಖಂಡಿತವಾಗಿ ಫಲ ಸಿಕ್ಕೇ ಸಿಗುತ್ತದೆ.

# ಚಿತ್ರಗಾರ ರವಿವರ್ಮ

ಭಾರತದ ಪ್ರತಿಯೊಂದು ಮನೆಯಲ್ಲೂ ಲಕ್ಷ್ಮಿ ಅಥವಾ ಸರಸ್ವತಿಯ ಸುಂದರ ಚಿತ್ರಗಳನ್ನು ಕಾಣುತ್ತೇವೆ. ಈ ಚಿತ್ರಗಳನ್ನು ಬರೆದವರು ಪ್ರಸಿದ್ಧರಾದ ಚಿತ್ರಕಾರ ರವಿವರ್ಮ.

ಸಾವಿರದ ಎಂಟನೂರ ನಲವತ್ತೆಂಟರಲ್ಲಿ ತಿರುವನಂತಪುರದ ಜಿಲ್ಲೆಯಲ್ಲಿ ರವಿವರ್ಮರು ಹುಟ್ಟಿದರು. ಬಾಲ್ಯದಿಂದಲೂ ಚಿತ್ರಗಳನ್ನು ಬರೆಯುವ ಆಸಕ್ತಿ ರವಿವರ್ಮ ಅವರಿಗಿದ್ದಿತು. ಇವರ ಮಾವ ರಾಜವರ್ಮ ಸುಪ್ರಸಿದ್ಧ ಚಿತ್ರಕಾರರಾಗಿದ್ದರು. ಚಿತ್ರಕಲೆಯಲ್ಲಿ ತನ್ನ ಅಳಿಯನಿಗಿದ್ದ ಅಭಿರುಚಿ ಆಸಕ್ತಿಯನ್ನು ಕಂಡು ಚಿತ್ರಕಲೆ ಕಲಿಸಿಕೊಟ್ಟನು.

ಒಂದು ದಿನ ರಾಜವರ್ಮರು ಮಹಾವಿಷ್ಣುವಿನ ಒಂದು ಚಿತ್ರ ಬರೆದು ಮುಗಿಸಿ ಬಣ್ಣ ಹಚ್ಚುತ್ತಿದ್ದರು. ಯಾವುದೋ ಕಾರ್ಯನಿಮಿತ್ತ ಅವರು ಚಿತ್ರವನ್ನು ಹಾಗೆಯೇ ಬಿಟ್ಟು ಹೊರಟು ಹೋದರು. ಅವರು ಹೋದ ಒಂದೆರಡು ನಿಮಿಷಗಳಲ್ಲಿಯೇ ಬಾಲಕ ರವಿವರ್ಮ ಆ ಕೊಠಡಿಗೆ ಬಂದ. ವಿಷ್ಣುವಿನ ಚಿತ್ರವು ಅಪೂರ್ಣವಾಗಿರುವುದನ್ನು ಅವನು ಕಂಡು ಅದನ್ನು ಪೂರ್ಣವಾಗಿ ಮಾಡಿ ಮುಗಿಸುವ ಮನಸ್ಸಾಯಿತು. ಕೂಡಲೇ ರವಿವರ್ಮನು ಚಿತ್ರವನ್ನು ಪೂರ್ಣ ಮಾಡಿ ಮುಗಿಸಿದ. ಮಹಾವಿಷ್ಣುವಿನ ಚಿತ್ರದ ಕೆಳಗೆ ವಿಷ್ಣುವಿನ ವಾಹನವಾದ ಗರುಡನ ಚಿತ್ರವನ್ನೂ ಸುಂದರವಾಗಿ ಚಿತ್ರಿಸಿ ಬಣ್ಣ ಹಚ್ಚಿದ.

ರವಿವರ್ಮನು ಚಿತ್ರ ಮುಗಿಸುತ್ತಿರುವ ಹಾಗೆಯೇ ಹೊರಗಡೆಯಿಂದ ಅವನ ಮಾವ ರಾಜವರ್ಮ ಬಂದರು. ಅವರು ಸದ್ದು ಮಾಡದೆ ಅಳಿಯನ ಚಿತ್ರಕಲೆಯ ಚತುರತೆ ನೋಡುತ್ತ ನಿಂತರು. ಅವರಿಗೆ ತುಂಬ ಆನಂದವಾಯಿತು. ಬಾಲಕ ರವಿವರ್ಮನು ಮುಂದೆ ಉತ್ತಮ ಕಲೆಗಾರ ಆಗುವನೆಂಬ ನಂಬಿಕೆ ದೃಢವಾಯಿತು.

ದಿನ ಕಳೆದಂತೆ ರವಿವರ್ಮ ಚಿತ್ರಕಲೆಯಲ್ಲಿ ಮುಂದುವರಿದ. ಅವನು ಕೆಲವು ದೇವರ ಚಿತ್ರಗಳನ್ನು ಬರೆದ. ರವಿವರ್ಮ ಬರೆದ ಚಿತ್ರಗಳನ್ನು ಜನರು ತಮ್ಮ ಮನೆಗಳ ಗೋಡೆ ಮತ್ತು ದೇವರ ಮನೆಗಳಲ್ಲಿ ತಗಲುಹಾಕಿ ಮನೆ

ಯನ್ನು ಅಲಂಕರಿಸಿಕೊಂಡಿರುತ್ತಾರೆ. ಭಾರತದ ರಾಜ–ಮಹಾರಾಜರೆಲ್ಲ ರವಿವರ್ಮನನ್ನು ತಮ್ಮ ಆಸ್ಥಾನಗಳಿಗೆ ಕರೆದು ಸನ್ಮಾನಿಸಿದರು. ಚಿತ್ರಗಳನ್ನು ಬರೆಯಿಸಿಕೊಂಡರು. ಅಂದು ರವಿವರ್ಮನ ಕೈಯಿಂದ ಬರೆದ ಮೂಲಚಿತ್ರಗಳನ್ನು ಇಂದಿಗೂ ಆ ರಾಜರ ಅರಮನೆಗಳಲ್ಲಿ ಶ್ರೀಮಂತರ ಮನೆಗಳಲ್ಲಿ ಶೋಭಿಸುತ್ತಿವೆ.

ದಿನ ಕ್ರಮೇಣ ರವಿವರ್ಮನ ಕೀರ್ತಿ ವಿದೇಶಗಳಲ್ಲೂ ಹರಡಿತು. ಸಾವಿರದ ಎಂಟನೂರ ತೊಂಭತ್ತ ಮೂರರಲ್ಲಿ ಅಮೆರಿಕದ ಚಿಕಾಗೋ ನಗರದಲ್ಲಿ ಒಂದು ಚಿತ್ರಪ್ರದರ್ಶನ ನಡೆಯಿತು. ಆ ಪ್ರದರ್ಶನದಲ್ಲಿ ರವಿವರ್ಮ ಅವರಿಂದ ಬರೆಯಲ್ಪಟ್ಟ ಚಿತ್ರವೇ ಅತ್ಯಂತ ಸೊಗಸಾದುದು ಎಂದಾಯಿತು. ಅದು ಬಹುಮಾನ ಗಳಿಸಿತು. ಇಂದು ರವಿವರ್ಮ ನಮ್ಮ ಮುಂದೆ ಇಲ್ಲ. ಅವರು ಬರೆದ ಚಿತ್ರಗಳು ಅವರ ಹೆಸರನ್ನೂ ನೆನಪನ್ನೂ ಅಮರಗೊಳಿಸಿವೆ.

## ಮೂರು ವಿಗ್ರಹಗಳ ಬೆಲೆ

ಇದು ಭೋಜರಾಜನ ಕಾಲದ ವಿಷಯ. ಒಂದು ದಿನ ಭೋಜರಾಜನ ದರ್ಬಾರು ಮೊದಲಾಗಿತ್ತು. ಅಲ್ಲಿ ಮಹಾ ಮಹಾ ಪಂಡಿತರು ಸೇರಿದ್ದರು. ಮಹಾಕವಿ ಕಾಳಿದಾಸನೂ ಕುಳಿತಿದ್ದನು.

ಆ ಸಮಯಕ್ಕೆ ಸರಿಯಾಗಿ ಒಬ್ಬ ಅಕ್ಕಸಾಲಿಗನು, ಹಿತ್ತಾಳೆಯಿಂದ ಮಾಡಿದ ಮೂರು ವಿಗ್ರಹಗಳನ್ನು ತೆಗೆದುಕೊಂಡು ಬಂದನು. ರಾಜನಿಗೆ ಆ ವಿಗ್ರಹಗಳನ್ನು ನೋಡಿ ಬಹಳ ಸಂತೋಷವಾಯಿತು. ಆ ವಿಗ್ರಹಗಳ ಬೆಲೆಯನ್ನು ಕೇಳಿದನು. ಆಗ ಆ ಅಕ್ಕಸಾಲಿಗನು, 'ತಾವು ದಯಮಾಡಿ ಎಷ್ಟನ್ನು ಕೊಡುತ್ತೀರೋ ಅಷ್ಟನ್ನು ನಾನು ತೆಗೆದುಕೊಳ್ಳುವೆನು' ಎಂದನು.

ಆದರೆ ಅವನು ಈ ಮೂರ್ತಿಗಳನ್ನು ಕೊಡುವ ಮುನ್ನ ಒಂದು ದಾರದ ತುಂಡನ್ನು ತೆಗೆದುಕೊಂಡನು.

ಮೊದಲನೆಯ ವಿಗ್ರಹದ ಒಂದು ಕಿವಿಯಲ್ಲಿ ದಾರವನ್ನು ಹಾಕಿದನು. ಆ ದಾರ ಮತ್ತೊಂದು ಕಿವಿಯಿಂದ ಬಂತು. ಹೀಗೆಯೇ ಎರಡನೆಯ ವಿಗ್ರಹದ ಕಿವಿಯಲ್ಲಿ ದಾರವನ್ನು ಹಾಕಿದಾಗ ಅದು ಬಾಯಿಯ ಮುಖಾಂತರ ಹೊರಕ್ಕೆ ಬಂದಿತು. ಆದರೆ ಮೂರನೆಯ ವಿಗ್ರಹದ ಮೂಲಕ ದಾರವನ್ನು ಹಾಕಿದಾಗ ಆ ದಾರ ಹೊರಗೆ ಬರಲೇ ಇಲ್ಲ. ಇದರ ಗೂಢಾರ್ಥ ರಾಜನಿಗೂ ಮತ್ತು ಇತರ ಪಂಡಿತರಿಗೂ ತಿಳಿಯಲಿಲ್ಲ.



ಅಕ್ಕಸಾಲಿಗನು ತಂದ ಮೂರು ಹಿತ್ತಾಳೆಯ ವಿಗ್ರಹಗಳನ್ನು ನೋಡಿ ರಾಜನಿಗೆ ಬಹಳ ಸಂತೋಷವಾಯಿತು

ಆಗ ಕಾಳಿದಾಸನು ಎದ್ದು ಇದರ ಅರ್ಥವನ್ನು ಈ ರೀತಿಯಾಗಿ ಹೇಳಿದನು. "ಕೆಲವು ಜನರು ಕಿವಿಯಿಂದ ಒಂದು ವಿಷಯವನ್ನು ಕೇಳಿದರೆ ಅವನ್ನು ಮತ್ತೊಂದು ಕಿವಿಯಿಂದ ಬಿಡುತ್ತಾರೆ. ಇಂಥ ಮನುಷ್ಯನ ಬೆಲೆ ಒಂದು ಕವಡೆಗೆ ಸಮ. ಆದ್ದರಿಂದ ಮೊದಲನೆಯ ವಿಗ್ರಹದ ಬೆಲೆ ಒಂದು ಕವಡೆ. ಆದರೆ ಕೆಲವರು ಒಂದು ಮಾತನ್ನು ಕಿವಿಯಿಂದ ಕೇಳಿ ಅದನ್ನು ಬಾಯಿಯಿಂದ ಬೇರೆಯವರಿಗೆ ಹೇಳುತ್ತಾರೆ. ಅಂಥ ಸ್ವಭಾವದವರ ಬೆಲೆ ಒಂದು ಚಿನ್ನದ ನಾಣ್ಯ. ಇದರಿಂದ ಎರಡನೆಯ ಮೂರ್ತಿಯ ಬೆಲೆ ಒಂದು ಚಿನ್ನದ ನಾಣ್ಯ. ಮತ್ತೆ

ಕೆಲವರು ಈ ರೀತಿ ಇರುತ್ತಾರೆ. "ಒಂದು ವಿಷಯವನ್ನು ಕೇಳಿದರೆ ಅದನ್ನು ತಮ್ಮ ಮನಸ್ಸಿನಲ್ಲಿಟ್ಟುಕೊಂಡು ಅದರಂತೆ ಆಚರಣೆಯಲ್ಲಿ ತೊಡಗುತ್ತಾರೆ. ಅಂತಹವರು ಒಂದು ಲಕ್ಷ ಚಿನ್ನದ ನಾಣ್ಯಗಳಿಗೆ ಸಮಾನರಾದವರು. ಆದ್ದರಿಂದ ಮೂರನೆಯ ವಿಗ್ರಹದ ಬೆಲೆ ಒಂದು ಲಕ್ಷ ಚಿನ್ನದ ನಾಣ್ಯಗಳು.

ಈ ವಿಷಯವನ್ನು ಕೇಳಿ ರಾಜನಿಗೆ ಬಹಳ ಸಂತೋಷವಾಯಿತು. ಅಕ್ಕಸಾಲಿಗನೂ ಇದನ್ನು ಒಪ್ಪಿದನು. ಭೋಜರಾಜನು, ಕಾಳಿದಾಸನ ಮಾತಿನ ಅನುಗುಣವಾಗಿ ಅಕ್ಕಸಾಲಿಗನಿಗೆ ವಿಗ್ರಹಗಳ ಬೆಲೆಯನ್ನು ಕೊಡಿಸಿದನು. ಅಲ್ಲದೆ ಕಾಳಿದಾಸನನ್ನು ಬಹಳವಾಗಿ ಗೌರವಿಸಿದನು.

---

## ಶಿವ ಕೊಟ್ಟ ವರ

ಒಂದು ಕಾಡಿನಲ್ಲಿ ಒಬ್ಬ ಬೇಡನಿದ್ದನು. ಅತನು ಕಾಡಿನಲ್ಲಿ ಪ್ರಾಣಿಗಳನ್ನು ಬೇಟೆ ಆಡುತ್ತಿದ್ದನು. ಅವುಗಳ ಮಾಂಸ ತಿಂದು ಜೀವಿಸುತ್ತಿದ್ದನು. ಮಹಾ ಶಿವರಾತ್ರಿಯ ದಿನ ಬೇಡನು ನಿತ್ಯದಂತೆ ಬೇಟೆ ಹುಡುಕಿಕೊಂಡು ಹೊರಟ. ಸಂಜೆ ಆಗುತ್ತಾ ಬಂತು. ಒಂದು ಪ್ರಾಣಿಯಾದರೂ ಕಣ್ಣಿಗೆ ಬೀಳಲಿಲ್ಲ. ಬೇಡ ಅಲ್ಲಿ—ಇಲ್ಲಿ ಅಲೆದಾಡಿದ. ಬೇಸತ್ತು ಋಷಿಯ ಆಶ್ರಮ ಒಂದರ ಬಳಿಗೆ ಬಂದ. ಅಂದು ಮಹಾಶಿವರಾತ್ರಿ. ಆ ದಿನವನ್ನು ಭಕ್ತಿಯಿಂದ ಆಚರಿಸುತ್ತಿದ್ದರು. ವಿಶೇಷ ಪೂಜೆ ನಡೆಯುತ್ತಿತ್ತು. "ಓಂ, ನಮಃ ಶಿವಾಯ, ನಮಃ ಶಿವಾಯ" ಎಂದು ಶಿವನಾಮ ಹೇಳುತ್ತಿದ್ದರು. ಆ ಬೇಡ ಇದನ್ನು ಕಂಡಿರಲಿಲ್ಲ. ಅವನಿಗೆ ಹಾಸ್ಯ. "ಇವರೆಲ್ಲೋ ಹುಚ್ಚರು" ಎಂದು ತಿಳಿದ.

ರಾತ್ರಿ ಆಗುತ್ತಾ ಬಂತು. ಒಂದು ಪ್ರಾಣಿಯ ಸುಳಿವೂ ಸಿಗಲಿಲ್ಲ. ಹಸಿವಿನ ಬಾಧೆ ಬೇರೆ ಕಾಡುತ್ತಿದೆ. ಬೇಡನು ಹಾಗೇ ಹೊರಟ. ಅಲ್ಲೊಂದು ಕೊಳ ಕಾಣಿಸಿತು. ಆ ಕೊಳದಲ್ಲಿ ಕೈಕಾಲು ಮುಖ ತೊಳೆದುಕೊಂಡ. ಆಗ ಒಂದು ಯೋಚನೆ ಹೊಳೆಯಿತು. 'ಪ್ರಾಣಿಗಳು ಹಗಲೆಲ್ಲಾ ಸುತ್ತಾಡಿರು

ತ್ತವೆ. ದಣಿದಿರುತ್ತವೆ. ತಮ್ಮ ಬಾಯಾರಿಕೆ ತೀರಿಸಿಕೊಳ್ಳಲು ತಪ್ಪದೆ ಈ ಕೊಳಕ್ಕೆ ಬರುತ್ತವೆ. ಇಲ್ಲಿ ಎತ್ತರವಾದ ಸ್ಥಳದಲ್ಲಿ ಕುಳಿತುಕೊಳ್ಳುತ್ತೇನೆ. ಬಂದ ಪ್ರಾಣಿ ಬೇಟೆಗೆ ಸಿಗುತ್ತದೆ' ಎಂದುಕೊಂಡ. ಒಂದು ಬಿಲ್ವಪತ್ರೆಯ ಮರ ಇತ್ತು. ಆ ಮರದ ಕೆಳಗೆ ಒಂದು ಈಶ್ವರಲಿಂಗ ಉದ್ಭವಿಸಿತ್ತು. ಅವನು ಆ ಮರವನ್ನೇರಿ ಕುಳಿತ. ಋಷಿಗಳ ಆಶ್ರಮ ನೆನಪಿಗೆ ಬಂತು. ಈಶ್ವರನ ವಿಗ್ರಹ ಮನಸ್ಸಿಗೆ ನೆನಪಾಯಿತು. "ನಮಃ ಶಿವಾಯ, ನಮಃ ಶಿವಾಯ" ಎಂದು ಪದೇ ಪದೇ ಹೇಳುತ್ತಿದ್ದ. ಕೈ ಸುಮ್ಮನಿರಬೇಕಲ್ಲ! ಮರದಲ್ಲಿದ್ದ ಬಿಲ್ವಪತ್ರೆಯ ಎಲೆಗಳನ್ನು ಕಿತ್ತು ಕೆಳಗೆ ಹಾಕುತ್ತಿತ್ತು. ಮರದ ಕೆಳಗೆ ಶಿವಲಿಂಗ ಇತ್ತು. ಅವನು ಬಿಸುಟ ಎಲೆಗಳು ಲಿಂಗದ ಮೇಲೆ ಬೀಳುತ್ತಿದ್ದವು. ಬೆಳಗಾಯಿತು. ಮರದ ಕೆಳಗಿದ್ದ ಲಿಂಗವೆಲ್ಲ ಬಿಲ್ವಪತ್ರೆ ಎಲೆಗಳ ರಾಶಿಯಿಂದ ಮುಚ್ಚಿ ಹೋಗಿತ್ತು. ಬೇಟೆ ಮಾತ್ರ ಸಿಗಲಿಲ್ಲ. ನಿರಾಸೆ ಆಯಿತು.

ಬೇಟೆಗಾರನ ಮನಸ್ಸು ಬದಲಾಯಿಸಿತ್ತು. ಅವನಿಗೆ ಆ ಕಸುಬೇ ಬೇಡವಾಯಿತು. ಬೇಟೆಯಲ್ಲೇ ಬೇಸರ ಆಯಿತು. ಅವನು ಶಿವನ ಆರಾಧನೆ ಮಾಡಿದ್ದನಷ್ಟೆ? ಶಿವ ಅವನಿಗೆ ಒಲಿದ. ಅದರಿಂದಲೇ ಅವನಿಗೆ ಬೇಟೆ ಸಿಗಲಿಲ್ಲವೇನೊ! ಶಿವನ ವರ. ಅವನ ಮನ ಬದಲಾಯಿತು. ಹಳ್ಳಿಗೆ ಹೋಗಿ ಬೇರೆ ಕಸಬು ಕಲಿತ. ಪುಣ್ಯವಂತನಾದ. ದಾನಧರ್ಮ ಮಾಡಿದ.

ಕಂಡೂ ಮಾಡುವ ಪಾಪಕ್ಕಿಂತ ಕಾಣದೆ ಮಾಡುವ ಪುಣ್ಯ ಮೇಲು.

---

# ಶಿವಾಜಿ ಕಲಿಸಿದ ಪಾಠ

ಛತ್ರಪತಿ ಶಿವಾಜಿಯು ಆ ಕಾಲದಲ್ಲಿ ಪರಾಕ್ರಮಿಯಾಗಿದ್ದುದಲ್ಲದೆ ಒಳ್ಳೆಯ ನಡತೆಯುಳ್ಳ ಚಕ್ರವರ್ತಿಯಾಗಿದ್ದ. ಸ್ತ್ರೀಯರಲ್ಲಿ ಬಹಳ ಗೌರವ ವಿಡುತ್ತಿದ್ದ. ಬೇರೆಯವರ ಮನೆಯ ಹೆಣ್ಣುಮಕ್ಕಳನ್ನು ತನ್ನ ಮಕ್ಕಳಂತೆ ಕಾಣುತ್ತಿದ್ದ. ಆ ಕಾಲದಲ್ಲಿ ಕಲ್ಯಾಣ ಪ್ರಾಂತ್ಯ ಮುಸಲ್ಮಾನರ ಆಡಳಿತದಲ್ಲಿತ್ತು.

ಅದರ (ಸುಬೇದಾರ) ಪ್ರಾಂತ್ಯಾಧಿಕಾರಿ ಅಹಮ್ಮದ್ ಎಂಬುವನು ಬಹಳ ಸಾಹಸಿಯಾಗಿದ್ದ. ಶಿವಾಜಿಯು ಕಲ್ಯಾಣವನ್ನು ಗೆಲ್ಲಲು ತನ್ನ ಸೇನೆಯನ್ನು ಕಳುಹಿಸಿದ. ಶಿವಾಜಿಯ ದಳಪತಿ ಬಾಜಿ ಸೋನದೇವನೆಂಬುವನು ಬಹಳ ಪರಾಕ್ರಮದಿಂದ ಯುದ್ಧ ಮಾಡಿ ಅಹಮ್ಮದನನ್ನು ಸೋಲಿಸಿದ.



ಶಿವಾಜಿಯು ಕ್ಷಮೆ ಬೇಡುತ್ತಾ "ತಂಗೀ, ನನ್ನ ದಳಪತಿ ಮಹಾಪರಾಧ ಮಾಡಿದ. ನೀನು ಅಂಜಬೇಡ, ನಿನ್ನ ತಾಯಿತಂದೆಗಳ ಬಳಿಗೆ ಕಳುಹಿಸಿಕೊಡುತ್ತೇನೆ" ಎಂದು ಧೈರ್ಯ ಹೇಳಿದ.

ಯುದ್ಧದಲ್ಲಿ ಪೆಟ್ಟು ತಿಂದ ಅಹಮ್ಮದ್ ಪ್ರಾಣ ಉಳಿಸಿಕೊಂಡು ಓಡಿದ. ಅನಂತರ ಶಿವಾಜಿಯ ದಳಪತಿ ಕಲ್ಯಾಣದ ಕೋಟೆಯನ್ನು ಲೂಟಿ ಮಾಡಿ ಅಲ್ಲಿದ್ದ ಐಶ್ವರ್ಯ—ಸಂಪತ್ತುಗಳನ್ನು ಕೈವಶ ಮಾಡಿಕೊಂಡ. ಅಹಮ್ಮದನ ರಾಣಿ ಕೋಟೆಯ ಒಳಗೇ ಇದ್ದಳು. ಸೋನದೇವನು ಅವಳನ್ನೂ ಕೈಸೆರೆ ಹಿಡಿದು, ಲೂಟಿ ಮಾಡಿ ಹಿಂತಿರುಗಿದ.

ಶಿವಾಜಿ ದರ್ಬಾರಿನಲ್ಲಿ ಕುಳಿತಿದ್ದ. ಸೋನದೇವನು ಗೆಲುವಿನ ಗರ್ವದಿಂದ ನಮಸ್ಕರಿಸಿದ. ಶಿವಾಜಿಯೊಂದಿಗೆ "ಮಹಾರಾಜ, ತಮ್ಮ ಆಜ್ಞಾನುಸಾರ ಕಲ್ಯಾಣದ ಮೇಲೆ ಆಕ್ರಮಣ ಮಾಡಿ ಗೆದ್ದೆ. ಆದರೆ ಅಹಮ್ಮದ್ ತಲೆತಪ್ಪಿಸಿಕೊಂಡು ಓಡಿಹೋದ. ಅಲ್ಲಿಯ ಸಂಪತ್ತು, ಚಿನ್ನ, ಬೆಳ್ಳಿ, ವಜ್ರಗಳನ್ನು ಲೂಟಿಮಾಡಿ ಕುದುರೆಗಳ ಮೇಲೆ ಹೇರಿಸಿಕೊಂಡು ಬಂದಿದ್ದೇನೆ. ಎಲ್ಲಕ್ಕಿಂತ ಅಮೂಲ್ಯವಾದ ನಿಧಿಯನ್ನು ಲೂಟಿಮಾಡಿ ತಂದಿದ್ದೇನೆ" ಎಂದು ಹೇಳಿಕೊಂಡ. ಅವನ ಬಾಯಿಂದ ಲೂಟಿಮಾಡಿಕೊಂಡು ಬಂದಿದ್ದ ಸಂಗತಿ ಕೇಳಿ ಶಿವಾಜಿಗೆ ಅಸಮಾಧಾನವಾಗಿತ್ತು. ಆದರೆ ಅಮೂಲ್ಯ ನಿಧಿ ತಂದುದಾಗಿ ಹೇಳಿಕೊಂಡ ಕಾರಣ ಅದಾವುದೆಂದು ತಿಳಿಯಲು ಅವನಿಗೆ ಕುತೂಹಲವಾಯಿತು. "ಅದು ಯಾವ ಅಮೂಲ್ಯ ನಿಧಿ?" ಎಂದು ಪ್ರಶ್ನಿಸಿದ.

ತನ್ನೊಡನ ತಂದಿದ್ದ ಅಹಮ್ಮದನ ಮಡದಿಯನ್ನು ತಂದು ಶಿವಾಜಿಯ ಮುಂದೆ ನಿಲ್ಲಿಸಿ "ಇದೇ ಮಹಾರಾಜ! ನಾನು ತಂದ ಅಪೂರ್ವ ನಿಧಿ" —ಎಂದ ಸೋನದೇವ ಹೆಮ್ಮೆಯಿಂದ. ಅದನ್ನು ಕಂಡ ಶಿವಾಜಿಯ ಮನಸ್ಸು ಕಸಿವಿಸಿಯಾಯಿತು. ಅವನು ಕೆಂಡವಾಗಿ ತನ್ನ ದಳಪತಿಯೊಂದಿಗೆ "ಸೋನದೇವ: ಈ ಸ್ತ್ರೀಯನ್ನು ಲೂಟಿ ಮಾಡಿ ತಂದೆ ಎಂದು ಹೇಳಿಕೊಳ್ಳಲು, ನೀನು ಹೆಮ್ಮೆ ಪಡಬೇಕೇನು? ನಾಚಿಕೆಯಾಗುವುದಿಲ್ಲವೇ ಹಾಗೆ ಹೇಳಿಕೊಳ್ಳಲು? ನಾನು ಹೇಳಿದ್ದು ಕಲ್ಯಾಣ ನಗರವನ್ನು ಗೆದ್ದು ತಾ ಎಂದು. ಕಂಡವರ ಹೆಂಡತಿಯನ್ನು ಅಪಹರಿಸಿ ತಾ ಎಂದಲ್ಲ. ವೀರನಿಗೆ ಇದು ಲಕ್ಷಣವೇ? ಅದೂ ಹಿಂದೂಸ್ಥಾನದ ಪವಿತ್ರ ಭೂಮಿಯಲ್ಲಿ ಹುಟ್ಟಿ ಇಂತಹ ಹೇಯ ಕೃತ್ಯ ನೀನು ಮಾಡಬಹುದೇ?" ಎಂದು ಹೇಳಿ, ಖಿನ್ನನಾಗಿ ಅಹಮ್ಮದನ ಮಡದಿಗೆ ಕೈಮುಗಿದು, ಕ್ಷಮೆ ಬೇಡುತ್ತಾ "ತಂಗಿ! ನನ್ನ ದಳಪತಿ ಮಹಾಪರಾಧ ಮಾಡಿದ. ನೀನು ಅಂಜಬೇಕಾಗಿಲ್ಲ. ನಿನ್ನ ತಂದೆ ತಾಯಿಗಳ ಬಳಿಗೆ ನಿನ್ನನ್ನು ಕಳುಹಿಸಿಕೊಡುತ್ತೇನೆ" ಎಂದು ಧೈರ್ಯ ಹೇಳಿ ಅಪಾರ ಹಣ ಕೊಟ್ಟು ಆದರದಿಂದ ಅವಳನ್ನು ತಂದೆಯ ಬಳಿಗೆ ಕಳುಹಿಸಿಕೊಟ್ಟ.

# ಒಳ್ಳೆಯ ಮಾತು

ಒಂದು ದಿನ ಒಬ್ಬ ದೊರೆಯು ಬೇಟೆಯಾಡಲು ತನ್ನ ಮಂತ್ರಿ ಮತ್ತು ಒಬ್ಬ ನೌಕರನೊಂದಿಗೆ ಹೊರಟನು. ಬೇಟೆ ಆಡುತ್ತಾ, ಆಡುತ್ತಾ ಅವರುಗಳು ಬಹುದೂರ ಬಂದುಬಿಟ್ಟ ಕಾರಣ ದಾರಿ ತಪ್ಪಿಹೋಯಿತು. ಆ ಹೊತ್ತಿನಲ್ಲಿ ರಾಜನು ಬಳಲಿಹೋಗಿದ್ದ ಕಾರಣ ಅವನಿಗೆ ಬಹಳ ಬಾಯಾರಿಕೆಯಾಯಿತು. ಬಳಿಯಲ್ಲೇ ಬಾವಿಯೊಂದು ಕಾಣಿಸಿತು. ಆ ಬಾವಿಯಿಂದ ನೀರೆತ್ತಲು ಅವರ ಬಳಿ ಹಗ್ಗ ಅಥವಾ ಪಾತ್ರೆ ಒಂದೂ ಇರಲಿಲ್ಲ. ಬಾವಿಗೆ ಸ್ವಲ್ಪ ದೂರದಲ್ಲಿ ಮರದ ಕೆಳಗೆ ಸಾಧುವೊಬ್ಬನು ಕುಳಿತಿದ್ದನು. ಆ ಸಾಧುವಿನ ಬಳಿಯಿಂದಲೇ ಹಗ್ಗ ಮತ್ತು ಪಾತ್ರೆಯನ್ನು ಪಡೆದು ತರಲು ರಾಜನು ತನ್ನ ನೌಕರನನ್ನು ಕಳುಹಿಸಿದನು. ಆ ನೌಕರನು ಸಾಧುವಿನ ಬಳಿಗೆ ಹೋಗಿ "ಲೋ ಸಾಧು! ನಿನ್ನ ಪಾತ್ರೆ ಸ್ವಲ್ಪ ಕೊಡು. ನಾವು ನೀರು ಕುಡಿಯಬೇಕಾಗಿದೆ"—ಎಂದು ಏಕವಚನದಲ್ಲಿಯೇ ಮಾತನಾಡಿಸಿದನು. ತಾನು ಪಾತ್ರೆಯನ್ನು ಕೊಡಲಾಗುವುದಿಲ್ಲ ಎಂದು ಸಾಧು ತಿಳಿಸಿದ.

ರಾಜನ ಆ ನೌಕರನು ಹಿಂತಿರುಗಿ ಬಂದು ಈ ಸಂಗತಿಯನ್ನು ತಿಳಿಸಿದಾಗ ರಾಜನು ಸಾಧುವಿನ ಬಳಿಗೆ ತನ್ನ ಮಂತ್ರಿಯನ್ನು ಕಳುಹಿಸಿದನು. ಮಂತ್ರಿಯು ಸಾಧುವಿನ ಬಳಿಗೆ ಹೋಗಿ 'ಅಯ್ಯಾ ಕುರುಡು ಸಾಧು! ಸ್ವಲ್ಪ ಹೊತ್ತಿನ ಮಟ್ಟಿಗೆ ನಿನ್ನ ಬಳಿ ಇರುವ ಆ ಪಾತ್ರೆಯನ್ನು ಕೊಟ್ಟರು'—ಎಂದು ಕೇಳಿದ. ಸಾಧುವು ತಾನು ಯಾರ ನೌಕರನೂ ಅಲ್ಲವೆಂದೂ ತನ್ನ ಬಳಿ ಇರುವ ಪಾತ್ರೆ ಕೊಡಲಾಗುವುದಿಲ್ಲವೆಂದೂ ಹೇಳಿದ.

ಮಂತ್ರಿಯೂ ಬರಿಗೈಯಲ್ಲಿ ಹಿಂತಿರುಗಿ ಬಂದ ಕಾರಣ ಸ್ವತಃ ರಾಜನೇ ಸಾಧುವಿನ ಬಳಿಗೆ ಹೋಗಬೇಕಾಗಿ ಬಂತು. ರಾಜನು ಬಹಳ ನಮ್ರತೆಯಿಂದ "ಸಾಧು ಮಹಾಶಯರೇ! ನಾನು ಬಾಯಾರಿಕೆಯಿಂದ ಬಹಳ ಬಳಲಿದವನಾಗಿದ್ದೇನೆ. ನನಗೆ ಇಲ್ಲಿ ಸ್ವಲ್ಪ ನೀರು ಸಿಗಬಹುದೇ?" ಎಂದು ಕೇಳಿದ. ಸಾಧುವು ಪ್ರತಿಯಾಗಿ 'ಬನ್ನಿ ಮಹಾರಾಜ! ತಾವು ಕುಳಿತುಕೊಳ್ಳಿ. ನಾನು ಈಗಲೇ ಬಾವಿಯಿಂದ ನೀರು ತುಂಬಿಕೊಂಡು ಬರುತ್ತೇನೆ,'-ಎಂದು ಹೇಳಿ ಆ ಸಾಧುವು ತನ್ನ ಕಮಂಡಲವನ್ನೂ ಹಗ್ಗವನ್ನೂ ತೆಗೆದುಕೊಂಡು ಬಾವಿಯ ಬಳಿಗೆ ನಡೆದ.

ಕಣ್ಣಿಲ್ಲದ ಆ ಸಾಧುವು ತನ್ನನ್ನು ಮಹಾರಾಜನೆಂದು ಸಂಬೋಧಿಸಿದ್ದು ಕಂಡು ದೊರೆಗೆ ಆಶ್ಚರ್ಯವಾಯಿತು. ಆ ಸಾಧು ತಂದುಕೊಟ್ಟ ನೀರನ್ನು ಕುಡಿದು ಬಾಯಾರಿಕೆ ಅಡಗಿಸಿಕೊಂಡನು. ಮೇಲೆ ಆ ರಾಜನು ಸಾಧುವನ್ನು ಕುರಿತು "ಸಾಧು ಮಹಾಶಯರೇ! ನಾನೊಬ್ಬ ರಾಜನೆಂದು ತಾವು ಹೇಗೆ ಗುರುತಿಸಿದಿರಿ. ತಮಗೆ ಕಣ್ಣೇ ಕಾಣುವುದಿಲ್ಲವಲ್ಲಾ!" ಎಂದು ಕೇಳಿದ. ಸಾಧುವು "ಮಹಾರಾಜ, ಮನುಷ್ಯನನ್ನು ಅವನ ನುಡಿಯಿಂದ ಗುರುತಿಸಬಹುದು. ದೊಡ್ಡವರಾದವರು ಎಂದಿಗೂ ನಮ್ರರೇ ಆಗಿರುತ್ತಾರೆ. ಅವರ ಬಾಯಲ್ಲಿ ಬರುವುದು ಮಧುರ ನುಡಿಯೇ" ಎಂದು ತಿಳಿಸಿದ.

# ಪರಾಕ್ರಮಶಾಲಿಯಾದ ಹುಡುಗ

ಯೂರೋಪ್ ಖಂಡದಲ್ಲಿ ಹಾಲೆಂಡ್ ಎಂಬ ಒಂದು ದೇಶವಿದೆ. ಇದು ಸಮುದ್ರದ ದಡದಲ್ಲಿದೆ. ಸಮುದ್ರ ತೀರವು ಹಾಲೆಂಡಿಗಿಂತಲೂ ಎತ್ತರದಲ್ಲಿದೆ. ಸಮುದ್ರದ ನೀರು ಹಾಲೆಂಡಿನೊಳಕ್ಕಾಗಲೀ ಸುತ್ತಲ ಹಳ್ಳಿಗಾಗಲೀ ಎಲ್ಲಿ ನುಗ್ಗುವುದೋ ಎಂಬ ಭಯವಿತ್ತು. ಅದಕ್ಕೋಸ್ಕರ ಸಮುದ್ರ ತೀರದಲ್ಲಿ ಅನೇಕ ಅಡ್ಡಕಟ್ಟೆಗಳನ್ನು ಕಟ್ಟಿದ್ದಾರೆ. ಈ ಗೋಡೆಗಳು ಸಮುದ್ರದ ನೀರನ್ನು ತಡೆಯುತ್ತವೆ. ಈ ಗೋಡೆಗಳಿರದಿದ್ದರೆ, ಸಮುದ್ರದ ನೀರು ಊರುಗಳಿಗೆಲ್ಲಾ ನುಗ್ಗುತ್ತಿತ್ತು.

ಅಂತಹ ಒಂದು ಹಳ್ಳಿಯಲ್ಲಿ ಜಾನ್ ಎಂಬ ಒಬ್ಬ ಬಾಲಕನಿದ್ದನು. ಒಂದು ದಿನ ಸಾಯಂಕಾಲ ಜಾನ್ ಒಂದು ಕಟ್ಟೆಯ ಬಳಿ ಆಡುತ್ತಿದ್ದನು. ಆಕಸ್ಮಾತ್ ಅವನ ದೃಷ್ಟಿ ಆ ಕಟ್ಟೆಯಲ್ಲಿದ್ದ ಸಂದಿನ ಕಡೆಗೆ ಹರಿಯಿತು. ಆ ಸಂದಿನ ಮೂಲಕ ಸ್ವಲ್ಪ ಸ್ವಲ್ಪ ನೀರು ಆ ಕಡೆಗೆ ಬರುತ್ತಿತ್ತು. ಮೊದಲು ಅವನು ಆ ವಿಚಾರವಾಗಿ ಅಷ್ಟು ಯೋಚಿಸಲಿಲ್ಲ. ಅನಂತರ ಸ್ವಲ್ಪಹೊತ್ತು

ಬಿಟ್ಟು ಪುನಃ ಅಲ್ಲಿಗೆ ಹೋದನು. ಮೊದಲಿಗಿಂತಲೂ ನೀರು ಸ್ವಲ್ಪ ಜೋರಾಗಿ ಈ ಕಡೆ ಬರುತ್ತಿತ್ತು. ಆಗ ಅವನು "ಒಂದು ವೇಳೆ ಈಗ ಈ ಸಂದನ್ನು ಮುಚ್ಚದಿದ್ದರೆ ಇಡೀ ರಾತ್ರಿ ನೀರು ನುಗ್ಗಿ ಕಟ್ಟೆ ಒಡೆದು ಇಡೀ ಊರಿಗೆ ಊರೇ ಕೊಚ್ಚಿ ಹೋಗುವುದು" ಎಂದು ಯೋಚಿಸಿ ತನ್ನ ಅಂಗೈಯಿಂದ ಆ ಬಿರುಕನ್ನು ಮುಚ್ಚಿಕೊಂಡೇ ನಿಂತನು.

ಅವನು ಆ ಬಿರುಕಿನ ಮೇಲೆ ಅಂಗೈ ಇಡುತ್ತಲೇ ನೀರು ಬರುವುದು ನಿಂತುಹೋಯಿತು.


ಆದರೆ ಬರು ಬರುತ್ತಾ ಅವನ ಅಂಗೈ ನೋಯಲು ಪ್ರಾರಂಭವಾಯಿತು. ಪಾಪ! ಎಷ್ಟು ಹೊತ್ತಿನವರೆಗೆ ಅವನು ತನ್ನ ಅಂಗೈಯಿಂದ ಮುಚ್ಚಿರಲು ಸಾಧ್ಯ? ಅವನು ನಾಲ್ಕು ಕಡೆಗೂ ನೋಡಿದನು. ಯಾರನ್ನಾದರೂ ಕೂಗುವುದಕ್ಕೆ ಪ್ರಯತ್ನ ಮಾಡಿದನು. ಆದರೆ ಹತ್ತಿರದಲ್ಲಿ ಯಾರೂ ಕಾಣಲಿಲ್ಲ. ಆಗಲೇ ಸಾಯಂಕಾಲವಾಗಿ ಹೋಗಿತ್ತು. ಆದ್ದರಿಂದ ಜನರೆಲ್ಲರೂ ತಮ್ಮ—ತಮ್ಮ ಮನೆಗಳಿಗೆ ಹೋಗಿಬಿಟ್ಟಿದ್ದರು.

ತನ್ನ ಅಂಗೈಯು ವಿಪರೀತ ನೋವಾಗಲು ಪ್ರಾರಂಭಿಸಿದ ಮೇಲೆ, ಜಾನನು ತನ್ನ ಬೆನ್ನನ್ನು ಆ ಸಂದಿಗ ಒತ್ತಿಕೊಂಡ. ನೀರು ಈ ಕಡೆಗೆ ಬರದಂತೆ ನಿಂತುಕೊಂಡನು.

ಬರುತ್ತಾ ಬರುತ್ತಾ ಕತ್ತಲಾಯಿತು. ಜಾನನಿಗೆ ವಿಪರೀತ ಹೆದರಿಕೆಯಾಯಿತು. ಆದರೆ ಆ ಬಾಲಕನು, "ಒಂದು ವೇಳೆ ನಾನು ಈಗ ಹೆದರಿ ಬಿಡಿ ಹೋದರೆ ಈ ಗೋಡೆಯು ಒಡೆದು, ಊರೆಲ್ಲಾ ನೀರಿನಲ್ಲಿ ಕೊಚ್ಚಿ ಹೋಗುತ್ತದೆ. ಆಗ ನಾನು ಬದುಕಿದ್ದು ಏನು ಪ್ರಯೋಜನ; ಈ ರೀತಿಯಾಗಿ ಬದುಕಿರುವುದಕ್ಕಿಂತಲೂ ದೇಶಕ್ಕಾಗಿ ಈ ರೀತಿ ಸಾಯುವುದೇ ಮೇಲು" ಎಂದು ಯೋಚಿಸಿದನು.

ಅವನು ತನ್ನ ಕಣ್ಣುಗಳನ್ನು ಮುಚ್ಚಿಕೊಂಡು ಇನ್ನೂ ಬಲವಾಗಿ ಒತ್ತಿಕೊಂಡು ನಿಂತನು. ರಾತ್ರಿ ಆದಂತೆಲ್ಲಾ ಚಳಿಯೂ ಸಹ ಹೆಚ್ಚುತ್ತಿತ್ತು. ಅವನ ಕೈಕಾಲುಗಳು ಚಳಿಯಿಂದ ನಡುಗುತ್ತಿದ್ದುವು. ಹಲ್ಲನ್ನು ಕಡಿಯುತ್ತಿದ್ದನು.

ಆದರೂ ಸಹ ಸ್ವಲ್ಪವೂ ಸ್ಥಳ ಬಿಟ್ಟು ಅಲುಗಾಡಲಿಲ್ಲ. ಇಡೀ ರಾತ್ರಿಯೆಲ್ಲಾ ಅದೇ ರೀತಿ ನಿಂತಿದ್ದನು.



ಜಾನನು ಸ್ವಲ್ಪವೂ ಸ್ಥಳ ಬಿಟ್ಟು ಅಲುಗಾಡಲಿಲ್ಲ. ಇಡೀ ರಾತ್ರಿಯೆಲ್ಲಾ ಅದೇ ರೀತಿ ನಿಂತಿದ್ದನು.

ಊರಿನ ಜನರೆಲ್ಲಾ ನಿಶ್ಚಿಂತೆಯಿಂದ ಮಲಗಿ ನಿದ್ರಿಸುತ್ತಿದ್ದರು. ಕೇವಲ ಒಬ್ಬ ಬಾಲಕನು ಇಡೀ ಊರಿನ ರಕ್ಷಣೆಗಾಗಿ ರಾತ್ರಿಯೆಲ್ಲಾ ಇಷ್ಟು ಕಷ್ಟ ಪಡುತ್ತಾ ಇದ್ದಾನೆಂಬುದು ಅವರಿಗೇನು ಗೊತ್ತು ?

ರಾತ್ರಿ ಕಳೆಯಿತು. ಬೆಳಗಾಯಿತು. ರಾತ್ರಿ ಜಾನನು ಮನೆಗೆ ಬಾರದಿದ್ದಕ್ಕೆ ಅವನ ಮನೆಯವರೆಲ್ಲರೂ ಬಹಳ ಚಿಂತೆಗೊಳಗಾಗಿದ್ದರು. ಬೆಳಗಾಗುತ್ತಲೇ ಅವರು ಜಾನನನ್ನು ಹುಡುಕಲು ಆರಂಭಿಸಿದರು. ಅವನ ಕೆಲವು ಸ್ನೇಹಿತರೂ ಸಹ ಅವನನ್ನು ಹುಡುಕಲು ಹೊರಟರು. ಹುಡುಕುತ್ತಾ ಹುಡುಕುತ್ತಾ ಅವರೆಲ್ಲ ಆ ಕಟ್ಟೆಯ ಬಳಿಗೆ ಬಂದರು. ಅಲ್ಲಿ ಜಾನನು ಗೋಡೆಗೆ ತನ್ನ ಬೆನ್ನು ಕೊಟ್ಟು ನಿಂತಿರುವುದನ್ನು ನೋಡಿದರು.

ಜನರೆಲ್ಲಾ ಅವನ ಬಳಿಗೆ ಬಂದು ಏನು ಜಾನ್ ಏನು ಮಾಡುತ್ತಿದ್ದೀಯೆ ? ಎಂದು ಕೇಳಿದರು. ಅವನು ಚಳಿಯಿಂದ ನಡುಗುತ್ತಿದ್ದನು. ಅವನಿಗೆ ಮಾತನಾಡಲೂ ಸಹ ಆಗುತ್ತಿರಲಿಲ್ಲ. ಅವನ ಬಟ್ಟೆಗಳೆಲ್ಲಾ ನೀರಿನಿಂದ ಒದ್ದೆಯಾಗಿದ್ದುವು. ಆದರೂ ಸಹ ಅವನ ಕಷ್ಟಪಟ್ಟು ಜನರಿಗೆ ಎಲ್ಲಾ ವಿಷಯಗಳನ್ನು ತಿಳಿಸಿದನು.

ಜನರು ಜಾನನನ್ನು ಕಟ್ಟೆಯಿಂದ ಆಚೆಗೆ ಸರಿಸಿದರು. ರಂಧ್ರವನ್ನು ಮುಚ್ಚಿದರು. ಜಾನನನ್ನು ತಮ್ಮ ಜೊತೆಗೆ ಮನೆಗೆ ಕರೆದು ಕೊಂಡುಹೋದರು. ಎಲ್ಲರೂ ಅವನ ಸಾಹಸ ಮತ್ತು ತ್ಯಾಗಕ್ಕಾಗಿ ಅವನನ್ನು ತುಂಬಾ ಕೊಂಡಾಡಿದರು.